ವಿಷಯಾನುಕ್ರಮಣಿಕೆ

ಅಧ್ಯಾತ್ಮಗ್ರಂಥಾವಳಿ

# ಅಧ್ಯಾತ್ಮಶಾಸ್ತ್ರಪರಿಭಾಷೆ

ಬರೆದವರು :

ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಕ್ರಮಾಂಕ ೧೭೨

ಪ್ರಕಾಶಕರು :

ಅಧ್ಯಾತ್ಮಪ್ರಕಾಶಕಾರ್ಯಾಲಯ,

ಹೊಳೆನರಸೀಪುರ.

1990

# ವಿಷಯಾನುಕ್ರಮಣಿಕೆ


ಪೀಠಿಕೆ

(೧) ವ್ಯವಹಾರ

(೨) ಲೌಕಿಕವ್ಯವಹಾರ

(೩) ಶಾಸ್ತ್ರೀಯವ್ಯವಹಾರ

(೪) ವ್ಯವಹಾರದ ಭೇದಗಳು

(೫) ಪರಮಾರ್ಥ

(೬) ಪರಮಾತ್ಮ, ಬ್ರಹ್ಮ

(೭) ವಿದ್ಯೆ, ಅವಿದ್ಯೆ

(೮) ಕಾರ್ಯಕಾರಣವಭಾವೂ, ಜೀವೇಶ್ವರವಿಭಾಗವೂ

# ಬಿನ್ನಹ

ಬ್ರಹ್ಮೀಭೂತ ಪರಮಹಂಸ ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಮಹಾಸ್ವಾಮಿಗಳು ವೇದಾಂತಶಾಸ್ತ್ರಗ್ರಂಥಗಳ ಪಠನಕ್ಕೆ ಪ್ರವೇಶಿಕೆಯಾಗಿ ಈ ಚಿಕ್ಕಪುಸ್ತಿಕೆಯನ್ನು ಬರೆದು ಅನುಗ್ರಹಿಸಿರುತ್ತಾರೆ. ಇದು ಶ್ರೀಶ್ರೀಗಳವರ ಆಯುಷ್ಯದ ಕಟ್ಟಕಡೆಯಭಾಗದಲ್ಲಿ ರಚಿತವಾಯಿತು. ಆಗ್ಗೆ ಅವರಿಗೆ ಬರೆಯುವ ಸಾಮರ್ಥ್ಯವೂ ಕುಗ್ಗಿಹೋಗಿತ್ತಾದ್ದರಿಂದ ತಮ್ಮ ಶಿಷ್ಯರಿಗೆ ಹೇಳಿ ಅವರ ಮೂಲಕ ಬರೆಯಿಸಿದರು. ಇದರಿಂದ ಈ ಗ್ರಂಥದಲ್ಲಿ ಭಾಷೆ ಹಾಗೂ ವಿಚಾರಸರಣಿಯಲ್ಲಿ ಏನಾದರೂ ಸಣ್ಣಪುಟ್ಟ ದೋಷಗಳು ಸಂಭವಿಸಿರಲೂಬಹುದು. ಇದು ಮತ್ತೊಮ್ಮೆ ಶ್ರೀಶ್ರೀಗಳವರ ಅವಗಾಹನೆಗೆ ಒಳಪಟ್ಟಿದ್ದಿದ್ದರೆ ಇನ್ನೂ ಸುಂದರವಾಗಿ ಹೊರಬರಬಹುದಾಗಿತ್ತು. ಆದರೆ ಅಂಥ ಅವಕಾಶವು ಈ ಗ್ರಂಥಕ್ಕೆ ಒದಗಲಿಲ್ಲ. ಆದರೂ ಗ್ರಂಥವನ್ನು ಪ್ರಕಟಿಸುವ ಮುಂಚೆ ಕಾರ್ಯಾಲಯದ ಪಂಡಿತರು ಒಮ್ಮೆ ನೋಡಿ ಕೆಲವು ವಾಕ್ಯರಚನೆಗಳನ್ನೂ ಲೇಖನದೋಷಗಳನ್ನೂ ತಿದ್ದಿ ಸರಿಪಡಿಸಿರುತ್ತಾರೆ. ಆದ್ದರಿಂದ ಇದು ವಾಚಕರಿಗೆ ಎಂದಿನಂತೆ ಅಭಿರುಚಿಯನ್ನುಂಟುಮಾಡುವದರಲ್ಲಿ ಸಂಶಯವಿಲ್ಲ.

ಶ್ರೀಶ್ರೀಗಳವರು ಇದೇ ಪರಿಭಾಷೆಯ ಗ್ರಂಥವನ್ನು ಸಂಸ್ಕೃತಭಾಷೆಯಲ್ಲಿ "ವಿಶುದ್ಧವೇದಾಂತಪರಿಭಾಷಾ" ಎಂಬ ಹೆಸರಿನಿಂದ ಬರೆದು ಕಾರ್ಯಾಲಯದ ಮೂಲಕ ಪ್ರಕಾಶಗೊಳಿಸಿರುತ್ತಾರೆ: ಆದರೆ ಅದು ದೇವವಾಣಿಯಲ್ಲಿದೆಯಾದ್ದರಿಂದ ಎಲ್ಲರಿಗೂ ಉಪಯೋಗಕರವಾಗಲಾರದು. ಈಗಲೂ ಸಂಸ್ಕೃತಭಾಷೆಯನ್ನು ಬಲ್ಲವರು ಅವಶ್ಯವಾಗಿ ಆ ಗ್ರಂಥವನ್ನೇ ಓದಬೇಕು. ಮಿಕ್ಕವರು ಈ ಗ್ರಂಥದಿಂದ ತೃಪ್ತರಾಗಬೇಕಾಗಿ ಕೋರಿದೆ.

ಈ ಗ್ರಂಥದ ಪ್ರಥಮಮುದ್ರಣದ ಪ್ರತಿಗಳೆಲ್ಲವೂ ಮಾರಾಟವಾಗಿಬಿಟ್ಟದ್ದರಿಂದ ಈ ಎರಡನೆಯ ಮುದ್ರಣವನ್ನು ಹೊರತರಲಾಗಿದೆ. ವಾಚಕರು ಪ್ರೋತ್ಸಾಹಿಸುವರೆಂದು ನಂಬಿದೆ.

ಹೊಳೆನರಸೀಪುರ,

ತಾ|| 1-11-1990.

ಪ್ರಕಾಶಕರು.

# ಪೀಠಿಕೆ

"ಪರಿಭಾಷೆ" ಎಂದರೆ ಒಂದು ಶಬ್ದವು ಆಯಾ ಶಾಸ್ತ್ರಗಳಲ್ಲಿ ಒಮ್ಮೆ ಪ್ರಯೋಗಿಸಲ್ಪಟ್ಟು ತನ್ನ ಅರ್ಥವನ್ನು ಉಂಟುಮಾಡುವದರ ಮೂಲಕ ಇಡಿಯ ಶಾಸ್ತ್ರಜ್ಞಾನಕ್ಕೇ ಉಪಕಾರಕವಾಗಿ ಪರಿಣಮಿಸುವದು. ಇದನ್ನು ಪರಿಭಾಷೆ ಎಂಬ ಹೆಸರಿನಿಂದ ಎಲ್ಲಾ ಶಾಸ್ತ್ರಗಳಲ್ಲಿಯೂ ಕರೆಯುತ್ತಾರೆ. ಪಾರಿಭಾಷಿಕಶಬ್ದಗಳ ತಿಳಿವಳಿಕೆಯಿಲ್ಲದವರಿಗೆ ಶಾಸ್ತ್ರಪ್ರವೇಶವು ದುಸ್ಸಾಧ್ಯವಾಗುತ್ತದೆ. ಒಂದು ವೇಳೆ ಆಯಾ ಶಾಸ್ತ್ರಗ್ರಂಥಗಳನ್ನು ಓದಿದರೂ ನಿಜವಾದ ಅರ್ಥವು ತಿಳಿಯದೆ ಮೋಸಹೋಗುವದೂ ಉಂಟು. ಆದ್ದರಿಂದ ಶಾಸ್ತ್ರಜಿಜ್ಞಾಸುಗಳು ಆಯಾ ಶಾಸ್ತ್ರಕ್ಕೇ ಮೀಸಲಾದ ಪರಿಭಾಷಾ ( ಶಬ್ದಗಳ ) ಪರಿಚಯವನ್ನು ಮೊದಲು ಮಾಡಿಕೊಳ್ಳಬೇಕು.

ಅಧ್ಯಾತ್ಮಶಾಸ್ತ್ರವೂ ಎಲ್ಲಾ ಶಾಸ್ತ್ರಗಳಂತೆಯೇ ಒಂದು ಶಾಸ್ತ್ರವಾದ್ದರಿಂದ ಅಧ್ಯಾತ್ಮಗ್ರಂಥಗಳನ್ನು ಓದುವವರು ಅವಶ್ಯವಾಗಿ ತಿಳಿದಿರಲೇಬೇಕಾದ ಶಬ್ದಗಳನ್ನೂ ಅವುಗಳ ಪಾರಿಭಾಷಿಕಾರ್ಥಗಳನ್ನೂ ಈ ಗ್ರಂಥದಲ್ಲಿ ಸಾಮಾನ್ಯವಾಗಿ ನಿರೂಪಿಸಲಾಗಿದೆ. ಇದು ಕೇವಲ ಏಕದೇಶಮಾತ್ರವಾಗಿದೆ. ಶಾಸ್ತ್ರಾಭ್ಯಾಸವು ಮುಂದುವರೆದಂತೆಲ್ಲ ಇನ್ನೂ ಹೆಚ್ಚಿನ ಪರಿಭಾಷೆಗಳ ಜ್ಞಾನವು ಆವಶ್ಯಕವಾಗುವದು. ಅದು ಅಭ್ಯಾಸಿಗಳಿಗೆ ಕ್ರಮೇಣ ಕೈವಶವಾಗುತ್ತದೆ. ಆದರೆ ಹೊಸದಾಗಿ ವೇದಾಂತಗ್ರಂಥಗಳನ್ನು ಓದಲಾರಂಭಿಸುವವರಿಗೆ ಅನುಕೂಲವಾಗಲೆಂದು ಇಲ್ಲಿ ಕೆಲವೇ ಪಾರಿಭಾಷಿಕಶಬ್ದಗಳನ್ನು ಕುರಿತು ಪ್ರಸ್ತಾಪಿಸಿದೆ.

ವೇದಾಂತಶಾಸ್ತ್ರದ ಅಭ್ಯಾಸಕ್ಕೆ ಅವಶ್ಯವಾದ ಶಬ್ದಗಳ ಪಾರಿಭಾಷಿಕಾರ್ಥವನ್ನು ವಿವರಿಸುವ ಗ್ರಂಥಗಳು ಕೆಲವು ಇರಬಹುದಾದರೂ ಅವು ಶುದ್ಧವಾದ ವೇದಾಂತಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಲು ಸಾಕಷ್ಟು ಸಹಕಾರಿಗಳಾಗಿಲ್ಲ. ಏಕೆಂದರೆ ನ್ಯಾಯಶಾಸ್ತ್ರ ಹಾಗೂ ಶಂಕರಭಾಷ್ಯದ ಮೇಲಿನ ವ್ಯಾಖ್ಯೋಪವ್ಯಾಖ್ಯಾನಗಳು–ಇವುಗಳ ಪ್ರಭಾವದಿಂದ ಅವು ತರ್ಕಬದ್ಧವಾಗಿ ನಿರೂಪಿಸಲ್ಪಟ್ಟು ವೇದಾಂತಜಿಜ್ಞಾಸುಗಳಿಗೆ ಮತ್ತಷ್ಟು ಭ್ರಮೆಯನ್ನುಂಟುಮಾಡುವಂತಿವೆ. ಆದ್ದರಿಂದ ವೇದಾಂತವಿಚಾರದಲ್ಲಿ ಬದ್ಧಾದರರಾದವರಿಗೆ ಸಾಂಪ್ರದಾಯಿಕವಾದ ಅರ್ಥವನ್ನು ವಿವರಿಸುವ ಮೂಲಕ ಪರಿಭಾಷೆಯನ್ನು ಸುಲಭಗೊಳಿಸಿ ಒದಗಿಸಲು ಈ ಪುಟ್ಟಗ್ರಂಥದಲ್ಲಿ ಪ್ರಯತ್ನಿಸಲಾಗಿದೆ. ವಾಚಕರಿಗೆ ಇದರಿಂದ ಸ್ವಲ್ಪವಾದರೂ ಉಪಕಾರವಾದಲ್ಲಿ ಲೇಖಕರ ಶ್ರಮವು ಸಾರ್ಥಕವಾದಂತೆಯೇ ಸರಿ.

ಇತಿ, ಲೇಖಕರು.

|| ಓಮ್ ||

# ಅಧ್ಯಾತ್ಮಶಾಸ್ತ್ರಪರಿಭಾಷೆ

## ಪೀಠಿಕೆ

೧. ಯಾವ ಶಾಸ್ತ್ರವನ್ನೇ ಆಗಲಿ ಅಭ್ಯಾಸಮಾಡಬೇಕೆಂದು ಇಚ್ಛಿಸುವವರು ಅದರಲ್ಲಿ ಮತ್ತೆಮತ್ತೆ ಬಳಸುತ್ತಿರುವ ಸಂಜ್ಞಾನಾಮಗಳನ್ನೂ ಅವುಗಳ ಅರ್ಥವನ್ನೂ ನೆನಪಿನಲ್ಲಿಟ್ಟಿರಬೇಕಾಗುವದು. ಉದಾಹರಣೆಗೆ : ವ್ಯಾಕರಣವನ್ನು ಓದುವವನು 'ಸಂಧಿ', 'ಸಮಾಸ', 'ವಿಗ್ರಹವಾಕ್ಯ', 'ಪ್ರಕೃತಿ', 'ಪ್ರತ್ಯಯ'- ಮುಂತಾದ ಶಬ್ದಗಳನ್ನೂ ಅವುಗಳ ಅರ್ಥವನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹೀಗೆಯೇ ಅಂಕಗಣಿತದಲ್ಲಿ 'ಸಂಕಲನ', 'ವ್ಯವಕಲನ' 'ಗುಣಾಕಾರ', 'ಭಾಗಾಹಾರ'-ಮುಂತಾದ ಸಂಜ್ಞೆಗಳನ್ನೂ ಅವುಗಳ ಅರ್ಥವನ್ನೂ ಮನಸ್ಸಿನಲ್ಲಿಟ್ಟುಕೊಳ್ಳುವದು ಅವಶ್ಯವಾಗುತ್ತದೆ. ಹೀಗೆಯೇ ಅಧ್ಯಾತ್ಮಶಾಸ್ತ್ರದಲ್ಲಿಯೂ ಕೆಲಕೆಲವು ಸಂಜ್ಞೆಗಳನ್ನೂ ಅವುಗಳ ಅರ್ಥವನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕಾಗುವದು. ಇವುಗಳಿಗೆ 'ಪಾರಿಭಾಷಿಕಶಬ್ದಗಳು' (Technical Words) ಎಂದು ಹೆಸರು. ಅವುಗಳಲ್ಲಿ ಕೆಲವು ಮುಖ್ಯವಾದ ಶಬ್ದಗಳನ್ನು ಈ ಹೊತ್ತಿಗೆಯಲ್ಲಿ ವಿವರಿಸಲಾಗಿದೆ.

## (೧) ವ್ಯವಹಾರ

೨. ಕೀಳುಪ್ರಾಣಿಗಳ ಮತ್ತು ಮನುಷ್ಯನ ನಡವಳಿಕೆಗಳಲ್ಲಿ ಮನಸ್ಸಿನ, ಇಂದ್ರಿಯಗಳ, ಮತ್ತು ಶರೀರದ ಕ್ರಿಯೆಗಳು ಅಡಕವಾಗಿರುತ್ತವೆ. ಉದಾಹರಣೆಗೆ : ಪಶುಪಕ್ಷಿಮೃಗಾದಿಗಳಂತೆಯೇ ಮನುಷ್ಯನಿಗೂ ಯಾವದಾದರೂ ಹೊರಗಿನ ಪದಾರ್ಥಗಳನ್ನು ಕಂಡಾಗ ಅವುಗಳಲ್ಲಿ ಕೆಲವು ಬೇಕು ಎನಿಸುತ್ತವೆ, ಮತ್ತೆ ಕೆಲವು ಬೇಡವೆನಿಸುತ್ತವೆ. ಅವುಗಳಲ್ಲಿ ಇಷ್ಟವಾದ (ಬೇಕೆನಿಸುವ)

ಪದಾರ್ಥಗಳ ಪ್ರಾಪ್ತಿಗೆ (ಅವುಗಳನ್ನು ಪಡೆಯುವದಕ್ಕೆ) ಪ್ರಯತ್ನಿಸುತ್ತಾನೆ ; ಅನಿಷ್ಟವಾದ (ಬೇಡವೆನಿಸಿದ) ಪದಾರ್ಥಗಳನ್ನು ಪರಿಹರಿಸಿಕೊಳ್ಳ(ತಪ್ಪಿಸಿಕೊಳ್ಳ)ವದಕ್ಕೆ ಅತ್ತ ಸರಿಯುತ್ತಾನೆ. ಹೀಗೆ ಇಷ್ಟಪ್ರಾಪ್ತಿಗೆಂದು ಪ್ರವರ್ತಿಸು(ಮುಂದುವರಿಯು)ವದೂ ಅನಿಷ್ಟಪರಿಹಾರಕ್ಕೆ ಮಾಡುವ ನಿವೃತ್ತಿ (ಹಿಂಜರಿಯುವಿಕೆ)ಯೂ ಎಲ್ಲಾ ಪ್ರಾಣಿಗಳಿಗೂ ಸ್ವಾಭಾವಿಕವಾಗಿರುತ್ತದೆ.

೩. ಮನಸ್ಸಿನಲ್ಲಿ ತೋರುವದನ್ನು ಪ್ರತ್ಯಯ (ತಿಳಿವಳಿಕೆಯ ಬಗೆ) ಎಂದೂ, ಅದನ್ನು ಮಾತುಗಳಿಂದ ಹೇಳುವದನ್ನು ವ್ಯಪದೇಶವೆಂದೂ, ಹೊರಗಿನ ವಸ್ತುಗಳನ್ನು ಪಡೆದುಕೊಳ್ಳುವದಕ್ಕೆ ಅಥವಾ ತಪ್ಪಿಸಿಕೊಳ್ಳುವದಕ್ಕೆ ಮಾಡುವ ಕೆಲಸವನ್ನು ಪ್ರವೃತ್ತಿ (ಮುಂದುವರಿಯುವದು), ನಿವೃತ್ತಿ (ಹಿಂಜರಿಯುವದು) ಎಂದೂ ಶರೀರೇಂದ್ರಿಯಗಳ ಚೇಷ್ಟೆಯನ್ನು ವ್ಯಾಪಾರವೆಂದೂ ಕರೆಯುವರು. ಈ ಮನೋವಾಕ್ಕಾಯಗಳ ನಡೆವಳಿಕೆಯ ಒಟ್ಟನ್ನು 'ವ್ಯವಹಾರ' ಎಂಬ ಹೆಸರಿನಿಂದ ಶಾಸ್ತ್ರಜ್ಞರು ಕರೆದಿರುತ್ತಾರೆ.

## (೨) ಲೌಕಿಕವ್ಯವಹಾರ

೪. ಶಾಸ್ತ್ರವು ಮುಖ್ಯವಾಗಿ ಮನುಷ್ಯನಿಗೆಂದೇ ಹೊರಟಿರುತ್ತದೆ. ಶಾಸ್ತ್ರವನ್ನು ತಿಳಿಯಬೇಕೆನ್ನುವ ಮನುಷ್ಯನನ್ನು ಅಧಿಕಾರಿ ಎನ್ನುವರು. ಅಧಿಕಾರಿ ಎಂದರೆ ತಿಳಿದುಕೊಳ್ಳುವ ಇಚ್ಛೆಯೂ ಯೋಗ್ಯತೆಯೂ ಇರುವವನು.

ಮನುಷ್ಯನು ವ್ಯವಹಾರದಲ್ಲಿ ಬುದ್ಧಿಪೂರ್ವಕವಾಗಿಯೂ ನಡೆಯುತ್ತಾನೆ; ಎಷ್ಟೋ ಸಲ ಪದಾರ್ಥದ ಸ್ವರೂಪವನ್ನು ವಿವೇಚನೆಮಾಡದೆಯೂ ನಡೆದುಕೊಳ್ಳುತ್ತಾನೆ. ಉದಾಹರಣೆಗೆ : ಚಿನ್ನ, ಬೆಳ್ಳಿ–ಮುಂತಾದ ಬೆಲೆಯುಳ್ಳ ಪದಾರ್ಥಗಳನ್ನು ವಿಚಾರಪೂರ್ವಕವಾಗಿ ಸಂಪಾದಿಸಿಕೊಂಡು ಒಡವೆಯೇ ಮುಂತಾದವುಗಳಿಗೆ ಉಪಯೋಗಿಸಿಕೊಳ್ಳುತ್ತಾನೆ. ದೂರದಲ್ಲಿ ಥಳಗುಟ್ಟುವ ಕಪ್ಪೆಯಚಿಪ್ಪನ್ನು 'ಬೆಳ್ಳಿ' ಎಂದು ಭಾವಿಸಿಕೊಂಡು ಆದರತ್ತ ಧಾವಿಸಿ ಅದು ಬೆಳ್ಳಿಯಲ್ಲವೆಂದು ಗೊತ್ತಾದಾಗ ಆಶಾಭಂಗವಾಗಲು ವ್ಯಥೆಪಡುತ್ತಾನೆ. ಹೀಗೆಯೇ ಒಂದು ಹಗ್ಗವನ್ನು ಬುದ್ಧಿಪೂರ್ವಕವಾಗಿ ಸಂಪಾದಿಸಿಕೊಂಡು ಗಂಟುಕಟ್ಟುವದು, ಅಥವಾ ಭಾವಿಯಿಂದ ನೀರುಸೇದುವದು–ಮುಂತಾದ ಕೆಲಸಕ್ಕೆ ಉಪಯೋಗಿಸಿಕೊಳ್ಳುತ್ತಾನೆ. ಹಗ್ಗವನ್ನು ಹಾವೆಂದು

ತಪ್ಪಾಗಿ ಭಾವಿಸಿಕೊಂಡು ಅಂಜಿಕೆಯಿಂದ ಓಡುವದೂ ಉಂಟು. ಹೀಗೆಯೇ ಕಣ್ಣು, ಕಿವಿ- ಮುಂತಾದ ಕರಣಗಳಿಂದ ಜ್ಞೇಯವಾದ (ತಿಳಿದುಕೊಳ್ಳತಕ್ಕ) ಪದಾರ್ಥಗಳನ್ನು ಸರಿಯಾಗಿ ಅಥವಾ ತಪ್ಪಾಗಿ ತಿಳಿದುಕೊಂಡು ಅದರಿಂದ ಅವುಗಳಲ್ಲಿ ಉಂಟಾದ ಇಚ್ಛಾದ್ವೇಷಗಳಿಂದ ಅವುಗಳ ಪ್ರಾಪ್ತಿಗೆ ಅಥವಾ ಪರಿಹಾರಕ್ಕೆ ಪ್ರಯತ್ನಿಸುವನು. ತನ್ನ ಕೆಲಸದ ಫಲವನ್ನು ಅನುಭವಿಸುವದೂ ಅವನ ಸ್ವಭಾವವೇ ಆಗಿದೆ. ಕೀಳುಪ್ರಾಣಿಗಳು ತಮ್ಮ ಮನಸ್ಸಿಗೆ ಸ್ವಭಾವದಿಂದ ಹೊಳೆಯುವ ಭಾವನೆಯಿಂದ ವ್ಯವಹರಿಸುತ್ತವೆ; ಮನುಷ್ಯನೂಕೂಡ ಪ್ರಾಣಿಗಳಂತೆಯೇ ನೈಸರ್ಗಿಕ (ಸ್ವಾಭಾವಿಕ) ಜ್ಞಾನದಿಂದಲೋ (instinct) ಅಲ್ಲದೆ ವಿವೇಚನಾಪೂರ್ವಕವಾಗಿ ಮಾಡಿಕೊಂಡ ಜ್ಞಾನದಿಂದಲೋ (discrimination) ವ್ಯವಹರಿಸುತ್ತಾನೆ ಅಷ್ಟೆ.

ಸಾಮಾನ್ಯಜನರೂ ಭೌತಿಕಶಾಸ್ತ್ರ (Science)ವನ್ನು ಅರಿತಿರುವ ಬುದ್ಧಿವಂತರೂ ಮಾಡುತ್ತಿರುವ ಈ ಬಗೆಯ ವ್ಯವಹಾರಕ್ಕೆ 'ಲೌಕಿಕ ವ್ಯವಹಾರ' ವೆಂದು ಹೆಸರು.

## (೨) ಶಾಸ್ತ್ರೀಯವ್ಯವಹಾರ

೫. ಶಾಸ್ತ್ರದಲ್ಲಿ- ಎಂದರೆ ವೇದದಲ್ಲಿ- ಕೆಲವು ಕರ್ಮಗಳನ್ನು ಮಾಡಬೇಕು ಎಂದು ಹೇಳಿರುತ್ತದೆ. ಅವುಗಳನ್ನು ಮಾಡುತ್ತಿರುವವರಿಗೆ ಪರಲೋಕ (ಸತ್ತಮೇಲೆ ದೊರೆಯುವ) ಇನ್ನೊಂದು ಲೋಕದಲ್ಲಿ ಅಭ್ಯುದಯ (ಒಳ್ಳೆ ಭೋಗ)ವು ದೊರಕುವದೆಂದು ವೇದದಲ್ಲಿ ಹೇಳಿದೆ. ಇನ್ನು ಕೆಲವು ಕರ್ಮಗಳನ್ನು ಮಾಡಬಾರದು ಎಂದು ವೇದದಲ್ಲಿ ಎಚ್ಚರಿಕೆಯನ್ನು ಕೊಟ್ಟಿರುತ್ತದೆ. ಮಾಡಬೇಕೆಂದು ಹೇಳುವದಕ್ಕೆ ವಿಧಿಯೆಂದೂ ಮಾಡಬಾರದೆಂದು ಹೇಳುವದಕ್ಕೆ ನಿಷೇಧವೆಂದೂ ಸಂಜ್ಞೆ. ಹೀಗೆ ವಿಧಿನಿಷೇಧಗಳನ್ನು ತಿಳಿಸುವ ವೇದಭಾಗಕ್ಕೆ ಕರ್ಮಕಾಂಡವೆಂದು ಹೆಸರು. ಆ ಭಾಗದಲ್ಲಿ ತಿಳಿಸಿರುವಂತೆ ಆಸ್ತಿಕರು (ವೇದವು ಹೇಳಿದ್ದು ಸತ್ಯವೆಂದು ನಂಬುವವರು) ಮಾಡುವ ವ್ಯವಹಾರವು ಶಾಸ್ತ್ರೀಯವ್ಯವಹಾರ.

೬. ವೇದದಲ್ಲಿ ಇನ್ನೊಂದು ಭಾಗವಿದೆ. ಅದರಲ್ಲಿ ಮನಸ್ಸನ್ನೇ ಮುಖ್ಯವಾಗಿಟ್ಟುಕೊಂಡು ಮಾಡಬೇಕಾದದ್ದನ್ನು ಹೇಳಿರುತ್ತದೆ. ಆದ್ದರಿಂದ ಅದಕ್ಕೆ

'ಜ್ಞಾನಕಾಂಡ'ವೆಂದು ಹೆಸರು. ಜ್ಞಾನವೆಂಬ ಮಾತಿಗೆ ವೇದದಲ್ಲಿ ಎರಡರ್ಥಗಳಿವೆ. ಮೊದಲನೆಯದಾಗಿ ಜ್ಞಾನವೆಂದರೆ ಉಪಾಸನೆ. ಉಪಾಸನೆ ಎಂದರೆ ಶಾಸ್ತ್ರದಲ್ಲಿ ಹೇಳಿರುವಂತೆ ಮನಸ್ಸಿನಲ್ಲಿ ಭಾವನೆಮಾಡಿಕೊಳ್ಳುವದು. ಉದಾಹರಣೆಗೆ "ತಾಯಿಯನ್ನೂ ತಂದೆಯನ್ನೂ ಆಚಾರ್ಯನನ್ನೂ (ಗುರುವನ್ನೂ) ದೇವರೇ ಎಂದು ತಿಳಿಯಬೇಕು"- ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಅಲ್ಲಿ ತಾಯಿ, ತಂದೆ, ಗುರು- ಇವರು ಮನುಷ್ಯರೇ ಆಗಿದ್ದರೂ ಅವರನ್ನು ದೇವರಂತೆ ಪೂಜ್ಯರೆಂದು ಭಾವಿಸಬೇಕು-ಎಂದು ಹೇಳಿರುತ್ತದೆ; ಆದ್ದರಿಂದ ಈ ತಿಳಿವಳಿಕೆಯು ಉಪಾಸನೆ ಎನಿಸುವದು. ಆದರೆ ಇವರು ನಮ್ಮ ತಾಯಿ, ತಂದೆ, ಅಥವಾ ಆಚಾರ್ಯ- ಎಂದು ತಿಳಿಯುವದು ವಸ್ತುತಂತ್ರ-ವಸ್ತುವು ಇದ್ದದ್ದು ಇದ್ದಹಾಗೆ ತಿಳಿಯುವ ಜ್ಞಾನ. ಈ ಎರಡು ಬಗೆಯ ಜ್ಞಾನಗಳನ್ನೂ ತಿಳಿಸುವ ವೇದಭಾಗಕ್ಕೆ 'ಜ್ಞಾನಕಾಂಡ' ವೆಂದು ಹೆಸರು.

ಕರ್ಮ ಮತ್ತು ಉಪಾಸನೆ ಇವೆರಡಕ್ಕೂ ಪರಲೋಕಗಳಲ್ಲಿ- ಕರ್ಮಕ್ಕೆ ಸ್ವರ್ಗ, ಬ್ರಹ್ಮದ ಉಪಾಸನೆಗೆ ಬ್ರಹ್ಮಲೋಕ, ಹೀಗೆ ಸತ್ತಮೇಲೆ ಫಲಗಳು ದೊರೆಕುವವೆಂದು ಶಾಸ್ತ್ರದಲ್ಲಿ ಹೇಳಿರುವದನ್ನು ನಂಬಿ ಕರ್ಮವನ್ನು ಅಥವಾ ಉಪಾಸನೆಯನ್ನು ಮಾಡಬೇಕಾಗುವದು. ಆದ್ದರಿಂದ ಇವೆರಡಕ್ಕೂ ಅದೃಷ್ಟ (ಇಲ್ಲಿ ಕಾಣದ) ಫಲ ; ಅದು ಈ ಲೋಕದಲ್ಲಿಯೇ ದೊರಕುವ ಫಲವಲ್ಲ. ಆದರೆ ವಸ್ತುತಂತ್ರಜ್ಞಾನಕ್ಕೆ- ಎಂದರೆ ಆತ್ಮನು ಇರುವಂತೆಯೇ ಆತ್ಮವಸ್ತುವನ್ನು ತಿಳಿಯುವ ಜ್ಞಾನಕ್ಕೆ-'ಆತ್ಮನು ಹೀಗೆ ಇರುತ್ತಾನೆ' ಎಂಬ ಜ್ಞಾನವೂ, ಅದರಿಂದಾಗುವ ಮೋಕ್ಷವೆಂಬ ಫಲವೂ ದೃಷ್ಟಫಲ, ಎಂದರೆ ಈ ಜನ್ಮದಲ್ಲಿ ನಾವು ಬದುಕಿರುವಾಗಲೇ ಆಗುವ ಫಲ. ಈ ಫಲವು ಸಿಕ್ಕುವದಕ್ಕೆ ನಾವು ಆತ್ಮತತ್ತ್ವದ ವಿಚಾರವನ್ನು ಶಾಸ್ತ್ರದಲ್ಲಿ- ಎಂದರೆ ವೇದದ ಭಾಗವಾದ ಉಪನಿಷತ್ತುಗಳಲ್ಲಿ ಹೇಳಿರುವಂತೆಯೇ ಮಾಡಬೇಕಾಗುವದು. ಆದ್ದರಿಂದ ಈ ವಿಚಾರವೂ ಶಾಸ್ತ್ರೀಯವ್ಯವಹಾರವೇ ಆಗಿರುತ್ತದೆ.

## (೪) ವ್ಯವಹಾರದ ಭೇದಗಳು

೧. ಮನುಷ್ಯನ ಲೌಕಿಕವ್ಯವಹಾರವೂ, ಶಾಸ್ತ್ರೀಯವ್ಯವಹಾರವೂ ಮನಸ್ಸಿನಿಂದ, ವಾಗಾದೀಂದ್ರಿಯಗಳಿಂದ ಮಾಡುವ ವ್ಯವಹಾರ, ಮತ್ತು

ನಮ್ಮ ಪ್ರವೃತ್ತಿನಿವೃತ್ತಿರೂಪವಾದ ವ್ಯಾಪಾರ- ಎಂದು ಮೂರು ಬಗೆಯಾಗಿ ಇರುವವೆಂದು ಆಗಲೇ ಹೇಳಿರುತ್ತೇವೆ. ಮನುಷ್ಯನ ಪ್ರವೃತ್ತಿನಿವೃತ್ತಿರೂಪ ವಾದ ವ್ಯವಹಾರದಲ್ಲಿ ಕ್ರಿಯಾಕಾರಕಫಲವೆಂಬ ಅಂಶಗಳಿರುತ್ತವೆ. ಒಂದು ಮಡಕೆ ಎಂಬ ಫಲವುಂಟಾಗುವದಕ್ಕೆ ಕುಂಬಾರನೆಂಬ ಕರ್ತೃ, ಮಣ್ಣೆಂಬ ಕರ್ಮ, ತಿಗುರಿ, ಕೋಲು ಮುಂತಾದ ಕರಣಗಳು ಅಥವಾ ಸಾಧನಗಳು, ಈ ಕ್ರಿಯೆಯನ್ನು ಮಾಡುವದಕ್ಕೆ ಆಧಾರವಾಗಿರುವ ಅಧಿಕರಣ (ಸ್ಥಲ) ಅಥವಾ ಯಾರಿಗಾಗಿ ಮಡಕೆಯನ್ನು ಮಾಡುತ್ತಾನೋ ಆ ಸಂಪ್ರದಾನ ಎಂಬ- ಕಾರಕಗಳು ಬೇಕು. ಕುಂಬಾರನು ಮಡಕೆಯನ್ನು ಮಾಡುವ ಕರ್ತೃವೂ ಆ ಕ್ರಿಯೆಯ ಫಲವನ್ನು ಅನುಭವಿಸುವ ಭೋಕ್ತೃವೂ ಆಗಿರು ತ್ತಾನೆ. ಆದ್ದರಿಂದ ಪ್ರಪಂಚದಲ್ಲಿ ಅನೇಕ ಕರ್ತೃಭೋಕ್ತೃಗಳಿರುತ್ತಾರೆ. ಕ್ರಿಯಾಕಾರಕಫಲವ್ಯವಹಾರವೆಂದರೂ ಕರ್ತೃಭೋಕ್ತೃವ್ಯವಹಾರ ವೆಂದರೂ ಒಂದೇ.

೮. ಕುಂಬಾರನು 'ನನಗೆ ಈ ಕ್ರಿಯೆಯಿಂದ ಇಂಥ ಫಲದ ಭೋಗವು ಸಿಕ್ಕುವದು'-ಎಂಬುದನ್ನು ಅರಿಯದಿದ್ದರೆ ಅವನಿಗೆ ಅದರ ವಿಷಯದಲ್ಲಿ ಇಚ್ಛೆ ಉಂಟಾಗುವದಿಲ್ಲ ; ಇಚ್ಛೆಯುಂಟಾದ ಹೊರತು ಆ ಕ್ರಿಯೆಯಲ್ಲಿ ಪ್ರವೃತ್ತಿ ಯಾಗುವದಿಲ್ಲ. ಹೀಗೆ ಇದನ್ನು ಮಾಡಿದರೆ ಇಂಥ ಅಪ್ರಿಯವಾದ ಫಲವು ಆಗುವದೆಂಬುದನ್ನು ತಿಳಿದಿದ್ದ ಹೊರತು ಆ ಕೆಲಸವನ್ನು ಬಿಡುವ ನಿವೃತ್ತಿಯೂ ಆಗುವದಿಲ್ಲ. ಆದ್ದರಿಂದ ಕರ್ತೃತ್ವಭೋಕ್ತೃತ್ವವ್ಯವಹಾರಕ್ಕಿಂತ ಮೊದಲು ಜ್ಞಾತೃಜ್ಞಾನಜ್ಞೇಯವ್ಯವಹಾರವಿರಬೇಕು. ಕುಂಬಾರನು ಜ್ಞಾತೃ, ಇದು ಇಂಥ ಕ್ರಿಯೆಯೆಂಬುದನ್ನು ಅರಿಯುವವನು. ಅವನಿಗೆ ಕ್ರಿಯಾಕಾರಕ ಫಲಗಳ ಜ್ಞಾನ ( ಅರಿವು ) ಇರಬೇಕು, ಅದಕ್ಕೆ ವಿಷಯವಾದ ಗಡಿಗೆಯೇ ಮುಂತಾದದ್ದು ಜ್ಞೇಯ. ಒಂದು ವಿಷಯದ ಜ್ಞಾನವು ವಸ್ತುಸ್ವರೂಪಕ್ಕೆ ಅನುಗುಣವಾಗಿ ಯಥಾರ್ಥಜ್ಞಾನವಾಗಿದ್ದ ಹೊರತು ಕರ್ತೃವಿಗೆ ಇಷ್ಟ ವಾದ ಫಲವನ್ನು ಕೊಡಲಾರದು. ಆದ್ದರಿಂದ ವಸ್ತುವನ್ನು ಸರಿಯಾಗಿ ತಿಳಿಸುವದಕ್ಕೆ ತಕ್ಕ ಕರಣಗಳು ಬೇಕು. ಇವಕ್ಕೆ ಪ್ರಮಾಣಗಳು ಎಂದು ಹೆಸರು. ಆದ್ದರಿಂದ ವಸ್ತುಗಳನ್ನು ನೇರಾಗಿ ಕಾಣಬಲ್ಲ ಇಂದ್ರಿಯಗಳು **ಪ್ರತ್ಯಕ್ಷಪ್ರಮಾಣ** ; ಇಂದ್ರಿಯಗಳು ಕಂಡ ಹೆಗ್ಗುರುತಿನಿಂದ ಊಹಿಸಿ

ತಿಳಿಯುವದಕ್ಕೆ ಸಾಧನವಾದದ್ದು ಅನುಮಾನ, ನಮಗೆ ಇಂದ್ರಿಯಗಳ ಮೂಲಕ ತಿಳಿಯದಿದ್ದಾಗ ಅವನ್ನು ತಿಳಿಯಿಸಿಕೊಡಬಲ್ಲವರ ವಾಕ್ಯವು ಶಬ್ದ-ಎಂಬ ಮೂರು ಪ್ರಮಾಣಗಳು ಅವಶ್ಯವಾಗಿ ಪ್ರವೃತ್ತಿನಿವೃತ್ತಿರೂಪವ್ಯವಹಾರಕ್ಕೆ ಬೇಕು. ಅನುಮಾನದಂತೆಯೇ ಊಹಿಸಿ ಕಲ್ಪಿಸುವದಕ್ಕೆ ಉಪಮಾನ (ಹೋಲಿಸಿ ಅರಿಯುವದು), ಅರ್ಥಾಪತ್ತಿ, (ಹೀಗಿರುವದರಿಂದ ಹೀಗೆಂದಾಯಿತು ಎಂದು ಕಲ್ಪಿಸುವದು) ಅನುಪಲಬ್ಧಿ (ಪ್ರಮಾಣದಿಂದ ಕಾಣದಿರುವದು)-ಎಂದು ಕೆಲವು ಬೇರೆಯ ಪ್ರಮಾಣಗಳೂ ಉಂಟು. ಹೀಗೆ ಸರಿಯಾದ ತಿಳಿವಳಿಕೆಗೆ ಬೇಕಾದ ಇಂದ್ರಿಯಗಳೆಂಬ **ಪ್ರಮಾಣ**, ಅವುಗಳಿಂದ ಅರಿಯುವದಕ್ಕೆ ತಕ್ಕ **ಪ್ರಮೇಯ**, ಅರಿಯುವವನಾದ **ಪ್ರಮಾತೃ** ಎಂಬ ವ್ಯವಹಾರವು **ಪ್ರಮಾತೃಪ್ರಮಾಣಪ್ರಮೇಯಗಳ ವ್ಯವಹಾರ**ವೆನಿಸುತ್ತದೆ.

೯. ಪ್ರಮೇಯವಾಗಿರುವ ಪದಾರ್ಥಗಳಲ್ಲಿ ಇಂಥ ದೇಶ(ಸ್ಥಲ)ದಲ್ಲಿ, ಇಂಥ ಕಾಲದಲ್ಲಿ, ಇಂಥ ನಿಮಿತ್ತಗಳಿಗೆ ಕಟ್ಟುಬಿದ್ದು ಒಳಪಟ್ಟಿರುವ ಕಾರಣಗಳಿಂದ, ಇಂಥ ದೇಶದಲ್ಲಿ ಇಂಥ ಕಾಲದಲ್ಲಿ, ಇಂಥ ವಸ್ತುಗಳಿಂದ ಕಾರ್ಯವುಂಟಾಗುವದು ಎಂಬ ಗೊತ್ತಾದ ನಿಯಮವಿದೆ. ಈ ನಿಯಮಕ್ಕೆ ಕಾರ್ಯಕಾರಣವ್ಯವಹಾರನಿಯಮವೆಂದು ಹೆಸರು.

## (೫) ಪರಮಾರ್ಥ

೧೦. ಲೌಕಿಕವ್ಯವಹಾರದಲ್ಲಿರುವವರಿಗೆ ಕಾಣಬರುವ ಕೆಲವು ಪದಾರ್ಥಗಳು ಸತ್ಯವಾಗಿರಲಾರವು, ಮತ್ತೆ ಕೆಲವು ಮಿಥ್ಯೆ, ಅನೃತ, ಹುಸಿತೋರಿಕೆಯಾಗಿರುವವು. ಸತ್ಯವೆಂದರೆ ಪ್ರಮಾಣದಿಂದ ತೋರುತ್ತಿದ್ದು ಯಾವದಾದರೂ ಪ್ರಯೋಜನವನ್ನುಂಟುಮಾಡುವ ಅರ್ಥಕ್ರಿಯೆಯನ್ನು ಮಾಡುವ ಶಕ್ತಿಯುಳ್ಳ ವಸ್ತು. ಉದಾಹರಣೆಗೆ ಹಗ್ಗವು ಕಣ್ಣು ಮುಂತಾದ ಇಂದ್ರಿಯಗಳಿಗೆ ಕಾಣುತ್ತದೆ ; ಗಂಟುಕಟ್ಟುವದು, ನೀರುಸೇದುವದು- ಮುಂತಾದ ಅರ್ಥಕ್ರಿಯೆಗಳನ್ನುಂಟುಮಾಡಬಲ್ಲದು. ಅದ್ದರಿಂದ ಅದು ಸತ್ಯ. ಹಗ್ಗದಲ್ಲಿ ಕಾಣುವ ಹಾವು ಸತ್ಯವಲ್ಲ. ಏಕೆಂದರೆ ಅದು ಪ್ರಮಾಣಜ್ಞಾನದಿಂದ ತೋರುವದಿಲ್ಲ. ಭ್ರಾಂತಿ, ಅಥವಾ ಮಿಥ್ಯಾಜ್ಞಾನ (ತಪ್ಪುತಿಳಿವಳಿಕೆಯಿಂದ) ಕಾಣು

ತ್ತಿದ್ದ ಹಗ್ಗವನ್ನು ತೋರಿಸುವ ಪ್ರಮಿತಿ ಅಥವಾ ಸಮ್ಯಗ್ಜ್ಞಾನ (ಸರಿಯಾದ ತಿಳಿವಳಿಕೆ)ದಿಂದ ಬಾಧಿತವಾಗುತ್ತದೆ; ಅದು ಯಾವಾಗಲೂ ಇರಲೇ ಇಲ್ಲ ಎಂದು ನಿಶ್ಚಿತವಾಗುತ್ತದೆ. ವಸ್ತುತಂತ್ರ ಎಂದರೆ ವಸ್ತುವು ಇದ್ದುದನ್ನು ಇದ್ದಂತೆ ತಿಳಿಸುವ ಜ್ಞಾನವು ಸಮ್ಯಗ್ಜ್ಞಾನವು; ಅದಲ್ಲದಿದ್ದರೂ ಅದು ಎಂದು ಆಗುವ ಬುದ್ಧಿಯು ಅಧ್ಯಾಸವು, ಮಿಥ್ಯಾಜ್ಞಾನವು, ಅಥವಾ ಭ್ರಾಂತಿಯು. ಅಧ್ಯಾಸದಿಂದ ಇರುವಂತೆ ಕಾಣುವ ವಿಷಯವನ್ನು ಮಿಥ್ಯೆ, ಅನೃತ, ಅಸತ್ಯ, ಅಸತ್ತು-ಎನ್ನುವರು. ಅದು ಮಿಥ್ಯಾಜ್ಞಾನದಿಂದ ತೋರುವಂತೆ ಕಾಣುವದೇ ಹೊರತು, ನಿಜವಾಗಿ ಇರುವದೇ ಇಲ್ಲ. ಒಂದು ವಸ್ತುವಿನಲ್ಲಿ ಮತ್ತೆ ಯಾವದಾದರೂ ಒಂದು ವಸ್ತುವು ಇರುವದೆಂಬ ಬುದ್ಧಿಯೇ ಅಧ್ಯಾಸವು. ಹೀಗೆಯೇ ಪರೆಗಣ್ಣಿನವರಿಗೆ ಒಬ್ಬ ಚಂದ್ರನೇ ಮತ್ತೊಂದು ಚಂದ್ರನೊಡನೆ ಇರುವಂತೆ ಕಾಣುತ್ತಿರುತ್ತಾನೆ. ಅದೂ ಅಧ್ಯಾಸನಿಮಿತ್ತವೇ. ಮಿಥ್ಯಾಜ್ಞಾನದಿಂದ, ಎಂದರೆ ಇಲ್ಲದಿದ್ದರೂ ಇದೆಯೆಂಬ ಬುದ್ಧಿಯಿಂದ ಹಾಗೆಂದು ಕಂಡಿತೇ ಹೊರತು, ಮತ್ತೊಬ್ಬ ಚಂದ್ರನು ಇರುವದೇ ಇಲ್ಲ. ಭ್ರಾಂತಿಯಿಂದ ಇಬ್ಬರೆಂದು ಕಾಣುವಾಗಲೂ ಒಬ್ಬನೇ ಚಂದ್ರನಿರುತ್ತಾನೆ.

೧೧. ವ್ಯವಹಾರದಲ್ಲಿ ದೇಶಕಾಲನಿಮಿತ್ತಗಳಿಂದ ಸಂಬದ್ಧವಾಗಿ ತಿಳಿಯಬರುವ ಪದಾರ್ಥಗಳು ಹೀಗೆ ಸತ್ಯವೆಂದೂ ಮಿಥ್ಯೆಯೆಂದೂ ವಿಭಕ್ತವಾಗಿ ಕಾಣಬರುತ್ತಿರುವವಷ್ಟೆ! ಈ ಅನೇಕ ಕರ್ತೃಭೋಕ್ತೃಗಳುಳ್ಳ ಕಾರ್ಯಕಾರಣಭಾವದಿಂದ ಕೂಡಿರುವ ದೃಶ್ಯರಾಶಿಯನ್ನು ಪ್ರಪಂಚ, ಜಗತ್ತು-ಎನ್ನುವರು. ಈ ಪ್ರಪಂಚವನ್ನು ಆಧ್ಯಾತ್ಮಿಕ (ಶರೀರದಲ್ಲಿರುವ ಭಾಗ), ಆಧಿಭೌತಿಕ (ಹೊರಗೆ ಆಕಾಶವೇ ಮುಂತಾದ ಭೂತಗಳ ಕಾರ್ಯವೆಂದು ಕಾಣುವ ಭಾಗ), ಆಧಿದೈವಿಕ (ಸೂರ್ಯಚಂದ್ರನಕ್ಷತ್ರಗಳಿಂದಲೂ ದೇವತೆಗಳಿಂದಲೂ ಕೂಡಿರುವ ಭಾಗ)– ಎಂದು ಮೂರು ಭಾಗವಾಗಿ ಶಾಸ್ತ್ರಜ್ಞರು ವಿಂಗಡಮಾಡಿರುತ್ತಾರೆ. ಅನೇಕ ಕರ್ತೃಭೋಕ್ತೃಗಳು ಕಾಣಬರುತ್ತಿರುವ ಈ ಜಗತ್ತಿನಲ್ಲಿಯೇ, ಲೌಕಿಕ ಮತ್ತು ಶಾಸ್ತ್ರೀಯವ್ಯವಹಾರಕ್ಕೆ ಆಶ್ರಯವಾಗಿರುವ ಈ ಜಗತ್ತು ನಿಜವಾಗಿಯೂ ಸತ್ಯವೆ ?– ಎಂಬುದನ್ನು ವಿಚಾರಿಸಿ ನಿಶ್ಚಯಿಸುವದಕ್ಕೆ ಹೊರಟಿರುವ ಉಪನಿಷತ್ತುಗಳು ಈ ಇಡಿಯ ದೃಶ್ಯರಾಶಿ

ಯೆಲ್ಲವೂ ನಿಜವಾಗಿಯೂ ಸತ್ಯವಲ್ಲ, ಇದಕ್ಕೆಲ್ಲ ಆಧಾರವಾಗಿರುವ ಪರಮಾರ್ಥವು (ನಿಜವಾದ ವಸ್ತುತತ್ತ್ವವು) ಮತ್ತೊಂದು ಇದೆ ಎಂದು ನಿಶ್ಚಯಿಸಿರುತ್ತಾರೆ. ಈ ವ್ಯಾವಹಾರಿಕಜಗತ್ತೆಲ್ಲಕ್ಕೂ-ಕಲ್ಪಿತವಾದ ಹಾವಿಗೆ ಹಗ್ಗವಂತೆಯೂ, ತೋರಿಕೆಯ ಚಂದ್ರನಿಗೆ ನಿಜವಾದ ಒಬ್ಬನೇ ಚಂದ್ರನಂತೆಯೂ ಅದು ಆಧಾರವಾಗಿರುತ್ತದೆ. ಅದೇ ನಿಜವಾದ ಸತ್ತ್ವವು, ಅದೇ ತೋರಿಕೆಯ ಕರ್ತೃಭೋಕ್ತೃರೂಪವಾದ ಸಂಸಾರ್ಯಾತ್ಮರೆಲ್ಲರ ನಿಜವಾದ ಆತ್ಮನು-ಎಂದು (ಛಾಂ. ೬-೯-೭) ಉಪನಿಷತ್ತಿನಲ್ಲಿ ಹೇಳಿರುತ್ತದೆ.

## (೬) ಪರಮಾತ್ಮ, ಬ್ರಹ್ಮ

೧೩. ಕರ್ತೃತ್ವಭೋಕ್ತೃತ್ವಗಳುಳ್ಳ, ಒಬ್ಬೊಬ್ಬ ಸಂಸಾರ್ಯಾತ್ಮನಿಗೂ ನಿಜವಾದ ಸ್ವಭಾವವಾಗಿರುವ ಒಬ್ಬನೇ ಆತ್ಮನನ್ನು ಪರಮಾತ್ಮ ಎಂದು ಕರೆಯುತ್ತಾರೆ. ಅವನು ಪ್ರಪಂಚವೆಲ್ಲವನ್ನೂ ಕರ್ತೃಭೋಕ್ತೃರೂಪವಾದ ಆತ್ಮರನ್ನೂ ತನ್ನ ಚೈತನ್ಯದಿಂದ (ಅರಿಯುವಿಕೆರೂಪದಿಂದ) ಬೆಳಗುತ್ತಿರುವನು. ನೇರವಾದ ನೋಟವುಳ್ಳ ಯಾವ, ಪ್ರಮಾಣಗಳ ನೆರವೂ ಇಲ್ಲದೆ ನೋಡುವವನಾದ್ದರಿಂದ ಅವನಿಗೆ ಸಾಕ್ಷಿ ಎಂದು ಹೆಸರು. ಕರ್ತೃಗಳಾದ ಆತ್ಮರು ಕ್ರಿಯೆಗಳಿಂದ ಮಾರ್ಪಡುತ್ತಿದ್ದರೂ ಈ ಆತ್ಮನು ಏತರಿಂದಲೂ ಮಾರ್ಪಾಡಾಗುವದಿಲ್ಲ. ಇವನು ಕರ್ತೃಭೋಕ್ತೃಗಳಂತೆ ಒಂದೊಂದು ಶರೀರಕ್ಕೂ ಬೇರೆಬೇರೆಯಾಗಿರುವದಿಲ್ಲ. ಇವನು ಎಲ್ಲಾ ಪ್ರಾಣಿಗಳಿಗೂ ಒಬ್ಬನೇ ಆಗಿರುವ ಕೇವಲಾತ್ಮನು, ಇವನಲ್ಲಿ ಯಾವ ಧರ್ಮಗಳೂ ಇಲ್ಲದ್ದರಿಂದ ನಿರ್ಗುಣನು. ಜಗತ್ತು ಅಥವಾ ಪ್ರಪಂಚವು ದೇಶಕಾಲನಿಮಿತ್ತಗಳಿಂದ ಕಟ್ಟುಪಡೆದಿರುವದಾಗಿದ್ದುಕೊಂಡು ಕ್ರಿಯಾಕಾರಕಫಲರೂಪವಾಗಿ ವಿಭಕ್ತವಾಗಿರುವಂತೆ, ಈ ಸಾಕ್ಷಿಯು ಯಾವ ದೇಶಕಾಲವಸ್ತುಗಳ ಎಲ್ಲೆಕಟ್ಟೂ ಇಲ್ಲದವನಾದ್ದರಿಂದ ಅನಂತನು ಬ್ರಹ್ಮವು- ಎಂದು ಇವನಿಗೆ ಹೆಸರು. ಕರ್ತೃಭೋಕ್ತೃಗಳಾದ ಆತ್ಮರುಗಳ ನಿಜವಾದ ಸ್ವರೂಪವೂ ಇವನೇ. ಎಲ್ಲೆಲ್ಲಿಯೂ ತಾನೇ ಇರುವ ಆತ್ಮನೆಂದು ತಿಳಿಯಿಸುವದಕ್ಕೆ ಇವನನ್ನು ಬ್ರಹ್ಮಾತ್ಮ ಎಂದೂ ಕರೆಯುತ್ತಾರೆ.

## (೭) ವಿದ್ಯೆ, ಅವಿದ್ಯೆ

೧೩. ಪ್ರಮಾತೃಪ್ರಮಾಣಪ್ರಮೇಯವ್ಯವಹಾರವೂ ಆ ಅಡಿಗಟ್ಟಿನ ಮೇಲೆ ನಿಂತುಕೊಂಡಿರುವ ಕ್ರಿಯಾಕಾರಕಫಲ (ಅಥವಾ ಕರ್ತೃಭೋಕ್ತೃ) ವ್ಯವಹಾರವೂ ಮನುಷ್ಯನ ಜಾಗ್ರದವಸ್ಥೆಯಲ್ಲಿ (ಎಚ್ಚರವಾಗಿರುವ ಸ್ಥಿತಿಯಲ್ಲಿ) ಮಾತ್ರ ಇರುತ್ತದೆ. ಪ್ರಮಾತೃ ಎಂದರೆ ಎಚ್ಚರದಲ್ಲಿ ಇಂದ್ರಿಯಗಳನ್ನು ಬಳಸಿಕೊಂಡು ಹೊರಗಿನ ವಿಷಯಗಳನ್ನು ಅರಿಯುವವನು. ಪ್ರಮಾಣಗಳು ಎಂದರೆ ಎಚ್ಚರದಲ್ಲಿ ಅವನವಾದ ಇಂದ್ರಿಯಗಳು ಮತ್ತು ಅವುಗಳ ಆಧಾರದಿಂದ ಮಾಡುವ ಕಲ್ಪನೆಗಳು. ಪ್ರಮೇಯವೆಂದರೆ ಆ ಪ್ರಮಾಣಗಳಿಗೆ ವಿಷಯವಾಗಿರುವ- ಅವುಗಳ ಮೂಲಕ ಜ್ಞಾನದಿಂದ ತಿಳಿದುಬರುವ- ಪದಾರ್ಥಗಳು. ಕನಸಿನಲ್ಲಿಯೂ ಎಚ್ಚರದಂತೆಯೇ ತಾನು ಪ್ರಮಾತೃವಾಗಿರುವೆನೆಂದೂ ಪ್ರಮಾಣಗಳಿಂದ ವಿಷಯಗಳನ್ನು ಅರಿಯುತ್ತಿರುವೆನೆಂದೂ ತೋರಿದರೂ ಅದೆಲ್ಲವೂ ಪರಮಾರ್ಥದ ಆಭಾಸವೇ, ಪ್ರಮಾತ್ರಾದಿಗಳಂತೆ ಹುಸಿತೋರಿಕೆಗಳೇ. ಏಕೆಂದರೆ ಕನಸುಗಳು ಒಬ್ಬೊಬ್ಬರಿಗೆ ಒಂದೊಂದು ಬಗೆಯಲ್ಲಿ ಆಗುತ್ತವೆ. ಅವು ಎಲ್ಲರಿಗೂ ಸಮಾನವಾಗಿರುವದಿಲ್ಲ. ಯಾವನಿಗೆ ಕನಸಾಗುತ್ತದೆಯೋ ಅವನು ಎಚ್ಚೆತ್ತಕೂಡಲೇ, 'ನಾನು ಒಂದು ಬೆಟ್ಟವನ್ನು ಕಂಡು ಅದರ ಮೇಲಕ್ಕೆ ಏರಿದಂತೆ ಆಯಿತು; ಆದರೆ ನಿಜವಾಗಿ ಹಾಗೇನೂ ಆಗಲಿಲ್ಲ'- ಎಂದು ಹೇಳುವನು. ಕನಸಿನ ಪ್ರಪಂಚವೂ ಅದರ ಜ್ಞಾನವೂ ಎಚ್ಚರದಲ್ಲಿ ಬಾಧಿತವಾಗಿಬಿಡುತ್ತದೆ- ಎಂದರೆ ಅದೆಲ್ಲವೂ ಹುಸಿತೋರಿಕೆಯೇ ಎಂದು ನಿಶ್ಚಿತವಾಗಿಬಿಡುತ್ತದೆ. ಆದ್ದರಿಂದ ಎಚ್ಚರದೃಷ್ಟಿಯ ವ್ಯವಹಾರವೇ ನಿಜವಾದ ವ್ಯವಹಾರ ; ಕನಸಿನಲ್ಲಾಗುವ ಪ್ರಮಾಣಪ್ರಮೇಯವ್ಯವಹಾರವೂ, ಕರ್ತೃತ್ವಭೋಕ್ತೃತ್ವವ್ಯವಹಾರವೂ ಆಭಾಸಮಾತ್ರ. ಆದ್ದರಿಂದ ವ್ಯವಹಾರದೃಷ್ಟಿ, ಪ್ರಮಾತೃದೃಷ್ಟಿ ಲೋಕದೃಷ್ಟಿ- ಎಂಬ ಮಾತುಗಳನ್ನು ಜಾಗ್ರದವಸ್ಥೆಯ ಎಚ್ಚರದ ಸ್ಥಿತಿಯಲ್ಲಿ ನಾವು ನಂಬುವ-ದೃಷ್ಟಿ ಎಂಬುದನ್ನು ನೆನಪಿನಲ್ಲಿಡಬೇಕು.

೧೪. ಹೀಗೆ ವ್ಯವಹಾರದೃಷ್ಟಿಯಿಂದ ನೋಡಿದಾಗ, ಕನಸುಗಳಲ್ಲಿ ನಮಗೆ ಆಗುವ ಸಮ್ಯಗ್ಜ್ಞಾನ, ಮಿಥ್ಯಾಜ್ಞಾನಗಳು (ಸರಿಯಾದ ತಿಳಿವಳಿಕೆ,

ಮತ್ತು ಭ್ರಾಂತಿ), ಸತ್ಯಮಿಥ್ಯಾವಸ್ತುಗಳು (ಪ್ರಮಾಣದಿಂದ ನಿಜವೆಂದು
ಅಥವಾ ಹುಸಿಯೆಂದ ತೋರುವ ವಸ್ತುಗಳು), ಎಂಬ ವಿಭಾಗಗಳೂ
(distinctions), ಅವುಗಳನ್ನು ಅರಿಯುವ ಪ್ರಮಾತೃವೂ (one who
ascertains), ಪ್ರಮೇಯಗಳೂ ಒಂದಕ್ಕಿಂತ ಒಂದು ಬೇರೆ ಎಂಬ ಭೇದ
ಗಳೂ (differences)–ಎಲ್ಲವೂ ಸಟೆಯೆಂದೂ ಅಲ್ಲಿದ್ದ 'ನಾನು' ಎಂಬ
ಪ್ರಮಾತೃವು ಎಚ್ಚರದ 'ನಾನು' ಎಂದು ತಿಳಿಯುವದು ತಪ್ಪೆಂತಲೂ ಕನಸಿನ
ಜ್ಞಾನವೆಲ್ಲವೂ ಮಿಥ್ಯೆ (ತಪ್ಪುತಿಳಿವಳಿಕೆ), ಅದು ಅಜ್ಞಾನ, ಅವಿದ್ಯಾ
ಮಾತ್ರವೇ ಎಂದೂ ಸ್ಫುಟವಾಗಿರುವದಷ್ಟೆ ?

ಈಗ ಎಚ್ಚರವಲ್ಲಿ ನಮಗೆ ಆಗುವ ಪ್ರಮಾಣಪ್ರಮೇಯಾದಿವ್ಯವಹಾರವು
ಸತ್ಯವೆ ?– ಎಂಬುದನ್ನು ವಿಚಾರಮಾಡಿದರೆ ನಮಗೆ ತೋರಿಬರುವದೇನೆಂದರೆ
ಎಚ್ಚರಕನಸುಗಳೆರಡರಲ್ಲಿಯೂ ಪ್ರಮಾಣಪ್ರಮೇಯವ್ಯವಹಾರವಿರುತ್ತದೆ.
ಎರಡರಲ್ಲಿಯೂ ಕರ್ತೃತ್ವಭೋಕ್ತೃತ್ವವ್ಯವಹಾರವಿರುತ್ತದೆ, ಈ ಎರಡರಲ್ಲಿ
ಯೂ ನಮ್ಮ ಪ್ರಮಾತೃತ್ವವು ಬಗೆಬಗೆಯಾಗಿರುತ್ತದೆ– ಎಂದು ಗೊತ್ತಾಗು
ವದು. ಇಲ್ಲಿ ನಾನು ಎಂದು ನಾವು ಒಬ್ಬೊಬ್ಬರೂ ಕರೆದುಕೊಳ್ಳುವ ಪದಾರ್ಥ
ಕ್ಕಿಂತ, ಕನಸಿನಲ್ಲಿ ನಾನು ಎಂದು ತೋರುವ ಪದಾರ್ಥವು ಬೇರೆಯಾಗಿಯೇ
ಇರುತ್ತದೆ. ಈ ಎರಡು ಅವಸ್ಥೆಗಳನ್ನೂ ಕಾಣುವ ನಮ್ಮ ನಿಜವಾದ ಸ್ವರೂ
ಪವು– ಎಂದರೆ ನಾವು ಆಗಲೇ ತಿಳಿಯಿಸಿರುವ ಸಾಕ್ಷಿಯಾದ ಆತ್ಮನು ಈ
ಎರಡವಸ್ಥೆಗಳ ಅಂಟಿಲ್ಲದೆ, ಮಾರ್ಪಡದೆ ಇರುತ್ತಾನೆ. ಈ ಪರಮಾರ್ಥವಾದ
ಆತ್ಮನ ದೃಷ್ಟಿಯಿಂದ ನೋಡಿದಾಗ ಸಾಕ್ಷಿರೂಪನಾದ ಆತ್ಮನೇ ಪರಮಾತ್ಮನು
–ಎಂದರೆ ನಿಜವಾದ ನಮ್ಮ ಸ್ವರೂಪವು ಎಂದೂ ಅವನೇ ಸತ್ಯವೆಂದೂ
ಮಿಕ್ಕ ಎಚ್ಚರದ ಅಥವಾ ಕನಸಿನ ವ್ಯವಹಾರವೆಲ್ಲವೂ ಹುಸಿಯೆಂದೂ ಸ್ಪಷ್ಟ
ವಾಗುವದು. ಸಾಕ್ಷಿಯಾದ ಆತ್ಮನು ಸತ್ಯ ಎಂದರೆ ಪ್ರಮಾಣದಿಂದ ತಿಳಿಯ
ಬರುವನೆಂದೂ ಅರ್ಥಕ್ರಿಯಾಕಾರಿ ಎಂದು ತಿಳಿಯುವ ವ್ಯಾವಹಾರಿಕಸತ್ಯ
ನೆಂದೂ ಅರ್ಥವಲ್ಲ ; ಮತ್ತೇನೆಂದರೆ : ತನ್ನ ಸ್ವರೂಪವನ್ನು ಎಂದಿಗೂ
ಮಾರ್ಪಡಿಸಿಕೊಳ್ಳದ, ಮತ್ತೊಬ್ಬರ ಹಂಗಿಲ್ಲದ ಸ್ವಯಂಸಿದ್ಧ (ತಾನೇ ಇರು
ವವನಾದ) ಸ್ವಯಂಪ್ರಕಾಶವಾದ (ತಾನೇ ತೋರುತ್ತಿರುವ ಅರಿವಿನ ರೂಪ
ನಾದ) ತತ್ತ್ವವು : ಪ್ರಮಾತೃಪ್ರಮಾಣಪ್ರಮೇಯಗಳ ರಾಶಿಯಾಗಿರುವ

ಪ್ರಪಂಚವನ್ನೂ ಪ್ರಪಂಚದ ಆಭಾಸವನ್ನೂ ತಮ್ಮೊಳಗೆ ಅಡಕಮಾಡಿಕೊಂಡಿರುವ ಜಾಗ್ರತ್ಸ್ವಪ್ನಾವಸ್ಥೆಗಳೂ, ಮಿಥ್ಯೆ, (ಅನೃತ) ಎಂದರೆ ತಮ್ಮ ಸ್ವರೂಪವನ್ನು ಯಾವಾಗಲೂ ಹಾಗೆಯೇ ಇಟ್ಟುಕೊಂಡಿರುವವಲ್ಲ. ಸಾಕ್ಷಿಯಾದ ಆತ್ಮನಂತೆ ಅವು ಸ್ವಯಂಸಿದ್ಧವಲ್ಲ, ಸ್ವಯಂಪ್ರಕಾಶವೂ ಅಲ್ಲ ; ಅವು ಸಾಕ್ಷಿಯ ಅರಿವಿನ ಬೆಳಕಿನಿಂದ ತೋರಿಕೊಳ್ಳುತ್ತಾ ಆ ಸಾಕ್ಷಿಯನ್ನೇ ಅವಲಂಬಿಸಿಕೊಂಡಿರುವ ತೋರಿಕೆಗಳು ; ಈ ದೃಷ್ಟಿಯಿಂದ ನೋಡಿದಾಗ ಸಾಕ್ಷಿಯೇ ನಮ್ಮೆಲ್ಲರ ನಿಜವಾದ ಆತ್ಮ, ಅವಸ್ಥೆಗಳೆರಡರಲ್ಲಿಯೂ ತೋರುತ್ತಿರುವ ಆತ್ಮರು ಆತ್ಮಾಭಾಸರೂಪರು.

೧೫. ಹೀಗೆ ಸಾಕ್ಷಿರೂಪನಾದ ಆತ್ಮನೊಬ್ಬನೇ ಪರಮಾರ್ಥಸತ್ಯ (ನಿಜವಾಗಿಯೂ ಮಾರ್ಪಡದ ಸತ್ಯ)ವಾಗಿದ್ದರೂ ನಾವು ಪ್ರಮಾತೃರೂಪರೂ ಕರ್ತೃಭೋಕ್ತೃರೂಪರೂ ಆದ ಸಂಸಾರಿಗಳೆಂದು ತಿಳಿದುಕೊಂಡಿರುವದಕ್ಕೆ ಕಾರಣವೇನು ?– ಎಂದರೆ ಇದಕ್ಕೆ ಉಪನಿಷತ್ತುಗಳಲ್ಲಿ (ಕಾ. ೨-೫, ಮುಂ. ೧-೨-೮) ಅವಿದ್ಯೆಯೇ (ತಪ್ಪುತಿಳಿವಳಿಕೆಯೇ) ಕಾರಣವೆಂದು ಹೇಳಿರುತ್ತದೆ. ಸತ್ಯ, ಮಿಥ್ಯೆ (ಅನೃತ) ಎಂಬ ಶಬ್ದಗಳಿಗೆ ವ್ಯವಹಾರದೃಷ್ಟಿಯಲ್ಲಿರುವ ಅರ್ಥವು ಹೇಗೆ ಪರಮಾರ್ಥದೃಷ್ಟಿಯಿಂದ ನೋಡಿದಾಗ ಇಲ್ಲವೋ, ಹಾಗೆಯೇ ಇಲ್ಲಿಯೂ ವಿದ್ಯೆ, ಅವಿದ್ಯೆ– ಎಂಬ ಮಾತುಗಳಿಗೂ ಈ ಎರಡು ದೃಷ್ಟಿಗಳ ಭೇದದಿಂದ ಬೇರೆಬೇರೆಯ ಅರ್ಥಗಳೇ ಇರುತ್ತವೆ. ವ್ಯವಹಾರದೃಷ್ಟಿಯಲ್ಲಿ 'ವಿದ್ಯೆ' ಎಂದರೆ ಪ್ರಮಾಣದಿಂದುಂಟಾಗುವ ಪ್ರಮೇಯದ ವಿಷಯದ ಸರಿಯಾದ ತಿಳಿವಳಿಕೆ ; 'ಅವಿದ್ಯೆ' ಎಂದರೆ ಪ್ರಮಾಣಗಳಿಂದ ಅರಿಯದೆ ಇರುವ ಅಗ್ರಹಣ, ಅದರಿಂದುಂಟಾಗುವ **ಸಂಶಯ** ಮತ್ತು ತಪ್ಪುತಿಳಿವಳಿಕೆ. ಪರಮಾರ್ಥದೃಷ್ಟಿಯಿಂದ ನೋಡಿದಾಗ, 'ವಿದ್ಯೆ' ಎಂದರೆ ಸಾಕ್ಷಿರೂಪನಾದ ಆತ್ಮನೊಬ್ಬನೇ ಪರಮಾರ್ಥಸತ್ಯವೆಂದೂ ಅವನ ಅರಿವಿಗೆ ವಿಷಯವಾಗಿರುವ ಅನಾತ್ಮವೂ, ಅವಸ್ಥೆಗಳೂ, ಅವಸ್ಥೆಗಳಲ್ಲಿ ತೋರುವ ಪ್ರಪಂಚವೂ, ಅನೃತ ಅಥವಾ ಮಿಥ್ಯೆ ಎಂದೂ ನಿರ್ಧರಿಸಿಕೊಳ್ಳುಳ್ಳುವ ತಿಳಿವಳಿಕೆ. 'ಅವಿದ್ಯೆ' ಯೆಂದರೆ ಆತ್ಮಾನಾತ್ಮರುಗಳನ್ನು ಒಂದನ್ನೊಂದರಲ್ಲಿಯೂ ಒಂದರ ಧರ್ಮವನ್ನು ಮತ್ತೊಂದರ ಧರ್ಮವೆಂದೂ ತಪ್ಪಾಗಿ ಅರಿಯುವ ಅಧ್ಯಾಸ, **ಅಧ್ಯಾರೋಪ, ಭ್ರಾಂತಿ.**

೧೬. ವೇದಾಂತದಲ್ಲಿ ಹೇಳಿರುವ ಈ ಅವಿದ್ಯೆಗೂ ವ್ಯವಹಾರದಲ್ಲಿ ತೋರುವ ಪ್ರಮೇಯಗಳ ವಿಷಯವಾದ ಅವಿದ್ಯೆಗೂ ಇರುವ ತಾರತಮ್ಯವನ್ನು ಚೆನ್ನಾಗಿ ಮನದಟ್ಟುಮಾಡಿಕೊಳ್ಳಬೇಕು. (1) ಮೊದಲನೆಯದಾಗಿ ವ್ಯಾವಹಾರಿಕವಾದ ಅವಿದ್ಯೆಯು ಸಾದಿ. ಒಂದಾನೊಂದು ದೇಶದಲ್ಲಿ ಒಂದಾನೊಂದು ಕಾಲದಲ್ಲಿ ಆಗತಕ್ಕದ್ದು ; ಅದು ಸಾಂತ, ಒಂದಾನೊಂದು ದೇಶದಲ್ಲಿ ಒಂದಾನೊಂದು ಕಾಲದಲ್ಲಿ ಬಾಧಿತವಾಗಿ ತೊಲಗತಕ್ಕದ್ದು. ಆದರೆ ಈ ವೇದಾಂತದಲ್ಲಿ ಹೇಳಿರುವ ಅವಿದ್ಯೆಯು ಅನಾದಿ ; ಅದು ಒಂದು ದೇಶದಲ್ಲಿ ಅಥವಾ ಒಂದು ಕಾಲದಲ್ಲಿ ಆಗುವ ಆಗಂತುಕ (ನಡುವೆ ಬಂದಿರುವ) ಘಟನೆಯಲ್ಲ ; ಈ ಅವಿದ್ಯೆಯಿಂದಲೇ ದೇಶವೂ, ಕಾಲವೂ, ಕಾರ್ಯಕಾರಣಭಾವವೂ ತೋರಿಕೊಳ್ಳುತ್ತವೆ. ಆದ್ದರಿಂದ ಇದು 'ಅನಾದಿ' ಎಂದರೆ ಯಾವಾಗ ಎಲ್ಲಿ ಉಂಟಾಯಿತು ಎಂದು ಹೇಳುವದಕ್ಕೆ ಬರುವಂಥದ್ದಲ್ಲ. ಇದು ನೈಸರ್ಗಿಕವಾ ಸ್ವಾಭಾವಿಕ, ಎಂದರೆ ಮನುಷ್ಯರೆಲ್ಲರ ಮನಸ್ಸಿಗೂ ಸ್ವಭಾವದಿಂದಲೇ ತೋರುತ್ತಿರುವದು. ಇದು 'ಅನಂತ' (ಕಾಲದಲ್ಲಿ ಅಥವಾ ದೇಶದಲ್ಲಿ ಕೊನೆ ಕಾಣುವದಲ್ಲ), ಮನುಷ್ಯನಿಗೆ ತಾನು 'ಪ್ರಮಾತೃ'- ಪ್ರಮೇಯಗಳನ್ನು ಅರಿಯುವವನು, ಎಂಬ ಭಾವನೆಯಿರುವವರೆಗೂ ಸ್ವಭಾವದಿಂದಲೇ ಇದ್ದುಕೊಂಡಿರುತ್ತದೆ.

(2) ಎರಡನೆಯದಾಗಿ ವ್ಯವಹಾರದಲ್ಲಿ ಉಂಟಾಗುವ ಅವಿದ್ಯೆಯು ಒಮ್ಮೆ ಹೋದಮೇಲೆಯೂ ಮತ್ತೊಮ್ಮೆ ಅದೇ ಮನುಷ್ಯನಿಗೆ ಉಂಟಾಗಬಹುದು. ಉದಾಹರಣೆಗೆ ಒಮ್ಮೆ ಹಾವೆಂದು ಭ್ರಮಿಸಿ ಬಳಿಕ ಇದೊಂದು ಹಗ್ಗವೇ-ಎಂದು ನಿಶ್ಚಯಿಸಿಕೊಂಡಮೇಲೂ ಮತ್ತೊಮ್ಮೆ ಅದೇ ಮನುಷ್ಯನಿಗೆ ಇದು ಹಾವು ಎಂಬ ಭ್ರಾಂತಿಯುಂಟಾಗುವ ಸಂಭವವಿದೆ ; ಆದರೆ ವೇದಾಂತಶಾಸ್ತ್ರದಲ್ಲಿ ಹೇಳುವ ಈ ಅವಿದ್ಯೆಯು ಆತ್ಮನೊಬ್ಬನೇ ಪರಮಾರ್ಥಸತ್ಯವೆಂಬ ನಿಶ್ಚಯದಿಂದ ಬಾಧಿತವಾದರೆ ಮತ್ತೆ ನಾನು ಸಂಸಾರಿ ಎಂಬ ಭ್ರಾಂತಿಯುಂಟಾಗುವದೇ ಇಲ್ಲ ; ಏಕೆಂದರೆ, ದೇಶಕಾಲಗಳಿಂದೊಡಗೂಡಿರುವ ಪ್ರಪಂಚವೆಲ್ಲವೂ ಅನೃತವೇ, ಸಾಕ್ಷಿಸ್ವರೂಪನಾದ ನನ್ನ ಆತ್ಮನೊಬ್ಬನೇ ಸತ್ಯವೆಂಬ ನಿಶ್ಚಯವಾದಾಗ ಅದು ಮತ್ತೆ ಎಂದೆಂದಿಗೂ ಹಿಂತಿರುಗುವಂತಿಲ್ಲ

(3) ವ್ಯವಹಾರದ ಅವಿದ್ಯೆಯಲ್ಲಿ ಯಾವ ಪದಾರ್ಥದ ವಿಷಯಕ್ಕೆ

ಅವಿದ್ಯೆಯುಂಟಾಗುವದೋ, ಅದು ಅವಿದ್ಯೆಯ ಕಾಲದಲ್ಲಿ ತೋರದೆ ಮರೆಯಾಗಿರುತ್ತದೆ. ಇದು ಬೆಳ್ಳಿಯೆಂಬ ಭ್ರಾಂತಿಯುಂಟಾದಾಗ ಕಪ್ಪೆಯಚಿಪ್ಪು ಕಾಣಿಸುವದೇ ಇಲ್ಲ. ಮನಸ್ಸಿನ ವಿಕಲ್ಪನೆಯು ಅದನ್ನು ಅರಿಯುವದಕ್ಕೆ ಅವಕಾಶವನ್ನು ಕೊಡದೆಇರುತ್ತದೆ. ಆದರೆ ವೇದಾಂತದಲ್ಲಿ ಹೇಳಿರುವ ಅವಿದ್ಯೆಯು ಸಾಕ್ಷಿರೂಪನಾದ ಆತ್ಮನನ್ನು ಎಂದಿಗೂ ಮರೆಮಾಡಲಾರದು. ಮನಸ್ಸೂ, ಅದರಲ್ಲಿರುವ ಈ ಸ್ವಾಭಾವಿಕಾವಿದ್ಯೆಯೂ ಆ ಸಾಕ್ಷಿಯ ಚೈತನ್ಯದಿಂದಲೇ ಬೆಳಗಿ ತೋರುತ್ತಿರುವವು. ಅವು ಆತ್ಮನನ್ನು ಮೋಡವು ನಕ್ಷತ್ರಗಳನ್ನು ಮರೆಮಾಡುವಂತೆ ಎಂದಿಗೂ ಮರೆಮಾಡುವದಿಲ್ಲ.

೧೭. ಅವಿದ್ಯೆ ಎಂಬ ಅನಾದಿಯಾದ ಪದಾರ್ಥವೊಂದು ಆತ್ಮನನ್ನು ಮುಸುಕುವದೆಂದು ತಿಳಿಯಬಾರದು. ಅವಿದ್ಯೆ ಎಂದರೆ ತಿಳಿಯದೆಇರುವದು, ಸಂಶಯವನ್ನು ಮಾಡುವದು, ತಪ್ಪಾಗಿ ತಿಳಿಯುವದು ಇಷ್ಟೇ ಬಗೆ. ಇವೆಲ್ಲವೂ ಮನಸ್ಸಿನ ಧರ್ಮಗಳಾದ್ದರಿಂದ, ಮನಸ್ಸು ಆತ್ಮನಲ್ಲಿ ಕಲ್ಪಿತವಾದ್ದರಿಂದ ಇವುಗಳು ಪದಾರ್ಥಗಳಲ್ಲ. ಇವುಗಳನ್ನು ನಾವು ಸಾಕ್ಷಿಸ್ವರೂಪವಾದ ಬುದ್ಧಿಯ ಅರಿವಿನ ಬಲದಿಂದಲೇ ತೋರುವ ಕಲ್ಪನೆಗಳು ಎಂದು ಹೇಳುತ್ತೇವಷ್ಟೆ ? ಮನಸ್ಸು ತೋರಿಕೊಳ್ಳುವ ಎಚ್ಚರ, ಅದರ ಆಭಾಸವು ತೋರುವ ಕನಸು, ಯಾವ ಮನಸ್ಸೂ ತೋರುವ ಸಂಭವವಿಲ್ಲದ ತನಿನಿದ್ರೆ ಈ ಮೂರು ಅವಸ್ಥೆಗಳನ್ನೂ ಯಾವಾಗಲೂ ಬೆಳಗುತ್ತಿರುವ ಸಾಕ್ಷಿಯೊಬ್ಬನು ಇದಾನೆಂದು ತಿಳಿಸುವದಕ್ಕಾಗಿ ಉಪನಿಷತ್ತುಗಳಲ್ಲಿ ಈ ಅವಿದ್ಯೆಯನ್ನು ಆತ್ಮೋಪದೇಶದ ಸೌಕರ್ಯಕ್ಕಾಗಿ ಬಳಸಿಕೊಂಡಿದ್ದಾರೆ. ಆದ್ದರಿಂದ ವಿದ್ಯಾವಿದ್ಯೆಗಳೆಂಬ ವಿಭಾಗವೂ ವ್ಯವಹಾರವೇ. ಇದನ್ನು ವೇದಾಂತವ್ಯವಹಾರ ಎಂದು ಕರೆಯಬಹುದು. ಹೀಗೆಯೇ, ಶಾಸ್ತ್ರ, ಗುರು, ಶಿಷ್ಯ—ಮುಂತಾದ ವಿಭಾಗವೂ ತತ್ತ್ವವನ್ನು ತಿಳಿಯಿಸುವದಕ್ಕಾಗಿ ಕಲ್ಪಿಸಿರುವ ವೇದಾಂತ ವ್ಯವಹಾರವೇ.

೧೮. ಪ್ರಮಾಣಪ್ರಮೇಯವ್ಯವಹಾರವೇ ಮುಂತಾದವುಗಳು ಅವಿದ್ಯೆಯಿಂದಲೇ ಆಗಿರುವವು ; ನಿಜವಾಗಿ ಯಾವ ವ್ಯವಹಾರವೂ ಇಲ್ಲವೆಂಬುದನ್ನು ಹೇಗೆ ಗೊತ್ತುಮಾಡಿಕೊಳ್ಳಬೇಕು ?—ಎಂಬುದನ್ನು ವಿಚಾರಿಸೋಣ. ಎಚ್ಚರದ ಶರೀರ, ಅಲ್ಲಿ ಕೆಲಸಮಾಡುತ್ತಿರುವ ಇಂದ್ರಿಯಗಳು, ಮನಸ್ಸು—ಇವುಗಳು

ತನಗಿವೆ ಎಂದು ತಿಳಿಯುವದು ತಪ್ಪೆಂಬುದಕ್ಕೆ ಆಗಲೇ ಯುಕ್ತಿಯನ್ನು ಹೇಳಿರುತ್ತದೆ. ವ್ಯವಹಾರದಲ್ಲಿ ಮನುಷ್ಯರು 'ನಾನು ದಪ್ಪನಾಗಿದ್ದೇನೆ, ಕೃಶನಾಗಿರುತ್ತೇನೆ, ಹುಡುಗನಾಗಿದ್ದೆನು, ಮುದುಕನಾದೆನು' ಎಂದು ವ್ಯವಹರಿಸುತ್ತಾ ದೇಹವೇ ನಾನು ಎಂದು ಭಾವಿಸಿರುತ್ತಾರೆ. ಹೀಗೆಯೇ ಇಂದ್ರಿಯಗಳನ್ನೂ, ಮನಸ್ಸನ್ನೂ ನಾನು ಎಂದು ವ್ಯವಹರಿಸುತ್ತಿರುತ್ತಾರೆ, ಮತ್ತು ನನ್ನವು ಎಂದೂ ವ್ಯವಹರಿಸುತ್ತಾರೆ. ಇವುಗಳು ಇಲ್ಲದೆ, 'ನಾನು ಪ್ರಮಾತೃ' (ಅರಿಯುವವನು) ಎಂದು ಹೇಳುವದಕ್ಕಾಗಲಾರದು, ಎಂದೂ ತಿಳಿದಿರುತ್ತಾರೆ ಇದರ ಇವುಗಳಿಲ್ಲದ ಅವಸ್ಥೆಗಳಲ್ಲಿಯೂ 'ನಾನು ಕನಸುಕಂಡೆನು', 'ನಾನು ನಿದ್ರಿಸಿದೆನು' ಎನ್ನುತ್ತಾರೆ! ನಾನು ವಿಷಯಿ (ಅರಿಯುವವನು). ಶರೀರಾದಿಗಳು ವಿಷಯ ( ಅರಿಯಲ್ಪಡತಕ್ಕವು )- ಎಂದು ಗೊತ್ತಾಗಿದ್ದರೂ ಒಂದಕ್ಕೊಂದು ಸಂಬಂಧವಿಲ್ಲದ ಈ ನಾನು ಮತ್ತು ವಿಷಯವಾದ ಶರೀರಾದಿಗಳನ್ನು ಒಂದನ್ನೊಂದೆಂದು ತಿಳಿದು ವ್ಯವಹಾರಮಾಡುತ್ತಾರೆ. ಈ 'ನಾನು' ಎಂಬುದೇ ಇಲ್ಲದ ತನಿನಿದ್ರೆ, ಮೂರ್ಛೆ-ಮುಂತಾದ ಅವಸ್ಥೆಗಳಲ್ಲಿರುವ ಸಾಕ್ಷಿಯನ್ನು ಹೀಗೆ ನಾನು ಎಂದು ತಪ್ಪಾಗಿ ಕರೆಯುತ್ತಿರುವದು ಅವಿದ್ಯೆಯಲ್ಲದೆ ಮತ್ತೇನು?

ಆದ್ದರಿಂದ ದೇಹೇಂದ್ರಿಯಾದಿಗಳ ಸಂಬಂಧವು ತನಗಿಲ್ಲದಿದ್ದರೂ ಇರುವಂತೆ ಭಾವಿಸಿಕೊಂಡು 'ನಾನು ಪ್ರಮಾತೃ' ಎಂದು ಭಾವಿಸಿರುವದು ಅವಿದ್ಯೆ; ಈ ಪ್ರಮಾತೃವಿಗೆ ಸಂಬಂಧಿಸಿರುವ ಪ್ರಮೇಯಗಳು ನನ್ನವು ಎನ್ನುವದು ಅವಿದ್ಯೆ : ಈ ದೇಹೇಂದ್ರಿಯಾದಿಗಳನ್ನು ನಾನೆಂದೂ, ನಾನು ಕರ್ತೃ, ನಾನು ಭೋಕ್ತೃ-ಎಂದು ತಿಳಿಯುವದೂ ಅವಿದ್ಯೆ ; ಶಾಸ್ತ್ರಗಳು ಪರಮಾರ್ಥದ ವಿಷಯವನ್ನು (ತತ್ತ್ವವನ್ನು ) ತಿಳಿಯಿಸಿಕೊಡುವ ಪ್ರಮಾಣಗಳೆಂದು ತಿಳಿಯುವದೂ ಅವಿದ್ಯೆ-ಎಂದೇ ನಿಶ್ಚಿತವಾಯಿತು.

೧೯. ನಾವು ಪ್ರಮಾತೃಗಳಲ್ಲ, ನಮಗೆ ಶರೀರಾದಿಗಳಿಂದಾಗಿರುವ ಕರ್ಮವಾಗಲಿ, ಅವುಗಳಿಂದಾಗಿರುವ ಜನನಮರಣಾದಿಸಂಸಾರದ ಬಂಧವಾಗಲಿ ನಿಜವಾಗಿಲ್ಲ-ಎಂಬುದು ನಿಜವಾದಮೇಲೆ ಇವುಗಳು ತೋರುವಾಗ ಇವನ್ನು ತನ್ನ ಅರಿವಿನಿಂದ ಬೆಳಗುತ್ತಲೂ ಇಲ್ಲದಾಗ ತಾನೇ ಬೆಳಗುತ್ತಲೂ ಇರುವ ಸಾಕ್ಷಿರೂಪವು ನಮ್ಮೆಲ್ಲರ ನಿಜವಾದ ಆತ್ಮನೆಂದೂ ಆ ಆತ್ಮನಿಗೆ ಯಾವ ಬಂಧವೂ ಇಲ್ಲದ್ದರಿಂದ ಅವನು ಸ್ವಭಾವದಿಂದ ನಿತ್ಯಶುದ್ಧಬುದ್ಧ

ಮುಕ್ತಸ್ವಭಾವನೇ: (ಯಾವಾಗಲೂ ಇರುವ, ಯಾವ ದೋಷವೂ ಇಲ್ಲದ, ಯಾವ ಕಟ್ಟುಪಾಡಿಗೂ ಸಂಬಂಧಪಡದ ಪರಮಾತ್ಮನೇ) ಎಂದಾಯಿತು. ಆದ್ದರಿಂದ ವಿದ್ಯಾವಿದ್ಯಾವಿಭಾಗದಂತೆಯೇ ಬಂಧಮೋಕ್ಷವ್ಯವಹಾರವೂ ಜನರಿಗೆ ತತ್ತ್ವವನ್ನು ತಿಳಿಯಿಸಿಕೊಡುವುದಕ್ಕಾಗಿ ವೇದಾಂತದಲ್ಲಿ ಕಲ್ಪಿಸಿರುವ ವ್ಯವಹಾರವೇ ಎಂದೂ ಆಯಿತು.

## (೮) ಕಾರ್ಯಕಾರಣಭಾವವೂ, ಜೀವೇಶ್ವರವಿಭಾಗವೂ

೨೦. ಹೀಗೆ ಪರಮಾರ್ಥದೃಷ್ಟಿಯಿಂದ ನೋಡುವಾಗ, ಆತ್ಮನೊಬ್ಬನೇ ಪರಮಾರ್ಥಸತ್ಯವೆಂದೂ ಅವನಿಗಿಂತ ಬೇರೆಯಾಗಿರುವ ಅಚೇತನವಾದ (ಅರಿವಿಲ್ಲದ) ಪದಾರ್ಥಗಳಾಗಲಿ, ಕರ್ತೃಭೋಕ್ತೃಗಳಾಗಲಿ, ಸಂಸಾರಿಗಳಾಗಲಿ ನಿಜವಾಗಿಲ್ಲವೇ ಇಲ್ಲವೆಂದೂ ನಿಶ್ಚಯವಾದರೂ ಪ್ರಮಾತೃದೃಷ್ಟಿಯೂ ಕರ್ತೃಭೋಕ್ತೃದೃಷ್ಟಿಯೂ ಬಿಗಿದುಕೊಂಡಿರುವ ಮನಸ್ಸಿನ ಸಾಮಾನ್ಯಜನರಿಗೆ ಪ್ರತ್ಯಕ್ಷಾದಿಪ್ರಮಾಣಗಳಿಂದ ತಿಳಿಯಬರುತ್ತಿರುವ ಈ ಗಡುತರವಾದ ಪ್ರಪಂಚವೆಲ್ಲವೂ ಹುಸಿಯೆ ? ಇಲ್ಲಿರುವ ಅನಂತ ಕರ್ತೃಭೋಕ್ತೃಗಳಾದ ಜೀವರೂ ಅವರಲ್ಲಿರುವ ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಸಾಂಸಾರಿಕತಾರತಮ್ಯವೂ ಅವರಿಗೆ ಧರ್ಮಾಧರ್ಮಗಳಿಂದಾಗುವ ಸುಖದುಃಖಗಳೂ ಇವನ್ನೆಲ್ಲ ವರ್ಣಿಸಿರುವ ಶ್ರುತಿಸ್ಮೃತಿಪುರಾಣಗಳೂ ಬರಿಯ ತೋರಿಕೆಯೆ? ಇದೇನೊ, ಕಣ್ಣುಕಟ್ಟುವಿದ್ಯೆಯಾಗಿ ತೋರುತ್ತಿದೆಯಲ್ಲ !– ಎಂಬ ಶಂಕೆಯು ಬಾಧಿಸುವ ಸಂಭವವಿದೆ.

ಆದರೆ ಈ ಶಂಕೆಗೇನೂ ಕಾರಣವಿಲ್ಲ. ಏಕೆಂದರೆ ಶಾಸ್ತ್ರೀಯವ್ಯವಹಾರದಲ್ಲಿ ಬೇರೆಬೇರೆಯ ಹಂತದ ಚಿತ್ತವುಳ್ಳ ಅಧಿಕಾರಿಗಳು ಇರುತ್ತಾರೆ. (೧) ಕರ್ಮವನ್ನು ಮಾಡಿ ಈ ಲೋಕದಲ್ಲಿಯೂ ಜನ್ಮಾಂತರಲೋಕಾಂತರಗಳಲ್ಲಿಯೂ ಪುಣ್ಯಫಲವಾದ ಸುಖವನ್ನೇ ಅನುಭವಿಸಬೇಕೆನ್ನುವವರು ಕರ್ಮಕ್ಕೆ ಅಧಿಕಾರಿಗಳು ; (೨) ಪರಮೇಶ್ವರನ ಧ್ಯಾನವನ್ನು ಮಾಡಿ ಬ್ರಹ್ಮಲೋಕದಲ್ಲಿ ಈಶ್ವರಭಾವವನ್ನು ಪಡೆದು ಬಗೆಬಗೆಯ ಭೋಗಗಳನ್ನು ಅನುಭವಿಸಬೇಕೆಂದು ಹವಣಿಸುವವರು, ಉಪಾಸನೆಗೆ ಅಧಿಕಾರಿಗಳು. (೩) ಬ್ರಹ್ಮಾತ್ಮೈಕತ್ವವನ್ನು ವಿಚಾರಮಾಡಿ ಅದರ ಬಲದಿಂದ ಈ ಜನ್ಮದಲ್ಲಿಯೇ ಆಗಲಿ

ಮತ್ತೊಂದು ಜನ್ಮದಲ್ಲಿಯೇ ಆಗಲಿ ಮುಕ್ತರಾಗಿ ಮತ್ತೆಮತ್ತೆ ಉಂಟಾಗುತ್ತಿರುವ ಜನನಮರಣಪ್ರವಾಹದಿಂದ ಬಿಡುಗಡೆಯಾಗಬೇಕೆಂದು ಹವಣಿಸುವವರು ಬ್ರಹ್ಮವಿಚಾರಕ್ಕೆ ಅಧಿಕಾರಿಗಳು.

ಹೀಗಿರುವದರಿಂದ (೧) ಶಾಸ್ತ್ರದಲ್ಲಿ ಹೇಳಿರುವ ಕಾಮ್ಯಕರ್ಮಗಳನ್ನು ಮಾಡಿ ಆಯಾ ಫಲಗಳನ್ನು ಅನುಭವಿಸುವವರಿಗಾಗಿಯೂ ಕಾಮ್ಯ (ಇಷ್ಟ ಫಲವನ್ನು ಕೊಡುವ) ಕರ್ಮಗಳನ್ನೂ ನಿಷಿದ್ಧ(ಮಾಡಬಾರದೆಂಬ) ಕರ್ಮಗಳನ್ನೂ ಬಿಟ್ಟು, ನಿತ್ಯ (ಅವಶ್ಯವಾಗಿ ಮಾಡಲೇಬೇಕಾದ) ಕರ್ಮಗಳನ್ನೂ ನೈಮಿತ್ತಿಕ (ಸಂಕ್ರಾಂತಿ, ಗ್ರಹಣ- ಮುಂತಾದ ನಿಮಿತ್ತಗಳು ಬಂದಾಗ ಮಾಡಬೇಕಾದ) ಕರ್ಮಗಳನ್ನೂ ಮಾಡುತ್ತಾ ಅವನ್ನು ಪರಮೇಶ್ವರನಿಗೆ ಆರಾಧನಾರೂಪವಾಗಿ ಸಮರ್ಪಿಸುವದರಿಂದ ಚಿತ್ತಶುದ್ಧಿ (ಪಾಪಕ್ಷಯವಾಗುವಿಕೆ)ಯನ್ನು ಪಡೆಯುವವರಿಗಾಗಿಯೂ ಕರ್ಮಯೋಗವನ್ನು ಶಾಸ್ತ್ರದಲ್ಲಿ ವಿಧಿಸಿರುತ್ತದೆ. ಇವರಂತೆ (೨) ಧರ್ಮ, ಅರ್ಥ, ಕಾಮ—ಎಂಬ ತ್ರಿವರ್ಗರೂಪವಾದ ಅಭ್ಯುದಯವೇ ತಮಗೆ ಆಗಬೇಕೆಂದು ಬಯಸುವವರಿಗಾಗಿಯೂ ಮಾಡಿದ ಕರ್ಮಗಳು ಸಮೃದ್ಧಿಯನ್ನು ಪಡೆಯಲೆಂದೂ- ಎಂದರೆ ಅವುಗಳಲ್ಲಿ ಎಲ್ಲಾ ಗುಣಗಳೂ ಇರುವದೆಂಬ ಸಾದ್ಗುಣ್ಯವು ಬರಲೆಂದೂ ಬಯಸುವವರಿಗಾಗಿಯೂ (೩) ಲೋಕಾಂತರದಲ್ಲಿ ಐಶ್ವರ್ಯವೂ ಅನಂತರ ಜ್ಞಾನವುಂಟಾಗಿ ಮತ್ತೆ ಸಂಸಾರಕ್ಕೆ ಹಿಂತಿರುಗುವ ಪುನರಾವೃತ್ತಿಯಿಲ್ಲದೆ ಕಲ್ಪಾಂತದಲ್ಲಿ ತಮಗೂ ಕ್ರಮಮುಕ್ತಿಯಾಗಲೆಂದು ಬಯಸುವವರಿಗೂ ಧ್ಯಾನರೂಪವಾದ ಮಾನಸಕರ್ಮವಾದ ಉಪಾಸನೆಯನ್ನು ವಿಧಿಸಿರುತ್ತದೆ. (೪) ಈ ಜನ್ಮದಲ್ಲಿಯೇ ತಮಗೆ ಮೋಕ್ಷವಾಗಬೇಕೆಂಬ ಹಂಬಲಿಕೆಯುಳ್ಳ ಮುಮುಕ್ಷುಗಳಿಗೆ ಈ ಲೋಕದಲ್ಲಿ ಫಲವನ್ನು ಕೊಡುವ ಲೌಕಿಕಕರ್ಮಗಳಿಗೆ ಆಗುವ ಫಲದಂತೆಯೇ ಪರಲೋಕದಲ್ಲಿ ಫಲವನ್ನು ಕೊಡುವ ಪುಣ್ಯಕರ್ಮದ ಫಲವೂ ಕೊನೆಗೆ ನಾಶವಾಗುವದೆಂಬುದನ್ನು ತಿಳಿಸಿ ಅಪವರ್ಗ (ಬಂಧವನ್ನು ತಪ್ಪಿಸಿಕೊಳ್ಳುವದು), ಮೋಕ್ಷ, ಮುಕ್ತಿ (ಸಂಸಾರದಿಂದ ಬಿಡುಗಡೆ), ನಿಃಶ್ರೇಯಸ್ಸು ( ಆತ್ಯಂತಿಕವಾಗಿ ಆಗುವ ಒಳ್ಳೆಯ ಫಲ )- ಎಂಬ ಬೇರೆಬೇರೆಯ ಹೆಸರುಗಳಿಂದ ಕರೆಯಲ್ಪಡುವ ಪರಮಪುರುಷಾರ್ಥ ( ಮನುಷ್ಯನು ಬಯಸಬಹುದಾದ ತೀರ ಕೊನೆಯ ಫಲ )ವನ್ನು ಪಡೆಯು

ವದಕ್ಕೆ ಸಾಧನವಾದ ಬ್ರಹ್ಮವಿದ್ಯೆಯನ್ನು ಬೋಧಿಸಿರುತ್ತದೆ. ಇಂಥ ಸದ್ಯೋಮುಕ್ತಿ (ಈಗಲೇ ಇಲ್ಲಿಯೇ ಆಗುವ ಮುಕ್ತಿ)ಯನ್ನು ಪಡೆಯುವವರಿಗೆ ಇರಬೇಕಾದ ವೈರಾಗ್ಯ (ಯಾವ ಕರ್ಮದ ಫಲದಲ್ಲಿಯೂ ಅನುರಾಗವಿಲ್ಲದಿರುವದು), ಶಾಂತಿ, ( ಮನಸ್ಸನ್ನು ಬಿಗಿಹಿಡಿಯುವದು ), ದಾಂತಿ (ಇಂದ್ರಿಯಗಳನ್ನು ಬಿಗಿಹಿಡಿದುಕೊಳ್ಳುವದು), ಉಪರತಿ (ಕರ್ಮಗಳನ್ನು ಬಿಟ್ಟುಬಿಡುವದು), ತಿತಿಕ್ಷೆ (ಶೀತೋಷ್ಣಸುಖದುಃಖದ್ವಂದ್ವಗಳನ್ನು ಸಹಿಸಿಕೊಳ್ಳುವದು), ಶ್ರದ್ಧೆ (ಶಾಸ್ತ್ರಾಚಾರ್ಯರುಗಳ ಉಪದೇಶದಲ್ಲಿ ವಿಶ್ವಾಸವಿಡುವದು), ಸಮಾಧಾನ (ಮನಸ್ಸನ್ನು ಏರುಪೇರಿಲ್ಲದಂತೆ ಇಟ್ಟುಕೊಳ್ಳುವದು) –ಎಂಬ ಶಮಾದಿಷಟ್ಕಸಂಪತ್ತಿಯನ್ನು ಉಪದೇಶಿಸಿರುತ್ತದೆ. ಹೀಗೆಯೇ ಸ್ಮೃತಿಗಳಲ್ಲಿಯೂ ಪುರಾಣಗಳಲ್ಲಿಯೂ ಬೇರೆಬೇರೆಯ ಅಂತಸ್ತಿನ ಯೋಗ್ಯತೆಯುಳ್ಳವರಿಗಾಗಿ ಕರ್ಮಗಳನ್ನೂ, ಉಪಾಸನೆಗಳನ್ನೂ, ಜ್ಞಾನವನ್ನೂ ಉಪದೇಶಿಸಿರುತ್ತದೆ.

ಇದೆಲ್ಲವನ್ನೂ ಶಾಸ್ತ್ರದಲ್ಲಿ ಉಪದೇಶಿಸಿರುವದು ದೇಶಕಾಲನಿಮಿತ್ತಗಳನ್ನೂ, ಕಾರ್ಯಕಾರಣವಾದವನ್ನೂ, ಧರ್ಮಾಧರ್ಮಗಳನ್ನೂ ಸತ್ಯವೆಂದೇ ಇಟ್ಟುಕೊಂಡಿರುವ ವ್ಯವಹಾರದೃಷ್ಟಿಯಿಂದಲೇ. ಆದ್ದರಿಂದ ಬ್ರಹ್ಮ (ಪರಮಾತ್ಮತತ್ತ್ವ)ವೆಂಬುದೊಂದೇ ಪರಮಾರ್ಥವೆಂಬ ಪರಮಾರ್ಥದೃಷ್ಟಿಯ ಉಪದೇಶಕ್ಕೆ ಇದರಿಂದ ಯಾವ ವಿರೋಧವೂ ಇಲ್ಲ.

೨೧. ಬ್ರಹ್ಮವು ನಮ್ಮೆಲ್ಲರ ನಿಜವಾದ ಆತ್ಮನೇ ಆಗಿರುವದರಿಂದಲೂ ಆತ್ಮನಿಗಿಂತ ಬೇರೆಯಾಗಿ ಮತ್ತೆ ಯಾವದೂ ಪರಮಾರ್ಥವಾಗಿ ಇಲ್ಲವಾದ್ದರಿಂದಲೂ, ವ್ಯವಹಾರದೃಷ್ಟಿಯನ್ನು ನಂಬಿರುವ ಮುಮುಕ್ಷುಗಳಿಗೆ ಅದರ ತತ್ತ್ವವನ್ನು ಹೇಳಿಕೊಡುವದಕ್ಕೆಂದು ವ್ಯಾವಹಾರಿಕಸತ್ಯವಾಗಿರುವ ಪ್ರಮಾಣಗಳನ್ನೂ ಶಾಸ್ತ್ರವನ್ನೂ ಉಪಯೋಗಿಸುವದು ಅನಿವಾರ್ಯವಾಗಿದೆ. ಲೋಕದಲ್ಲಿ ಧ್ವನಿರೂಪವಾಗಿರುವ ಅಕಾರಾದಿಗಳ ತಿಳಿವಳಿಕೆಗಾಗಿ ಕಾಗದ, ಮಶಿ–ಮುಂತಾದವುಗಳ ನೆರವಿನಿಂದ ಬರೆದ ಗುರುತುಗಳನ್ನು ಅಕ್ಷರಗಳೆಂದು ಕಲ್ಪಿಸಿ ಉಪಯೋಗಿಸುವಂತೆಯೂ ನೆರಳು, ಪ್ರತಿಬಿಂಬ–ಮುಂತಾದ ತೋರಿಕೆಗಳ ಸಹಾಯದಿಂದ ಅವುಗಳಿಗೆ ಆಧಾರವಾಗಿರುವ ಗಿಡಮರಗಳು, ಪ್ರಾಣಿಗಳು, ಮನುಷ್ಯರು– ಮುಂತಾದವನ್ನು ಊಹಿಸಿಕೊಳ್ಳುವಂತೆಯೂ ಲೌಕಿಕ

ದೃಷ್ಟಾಂತಗಳಿಂದಲೂ, ಶಾಸ್ತ್ರವಚನ, ಬೋಧಕನ ಮತ್ತು ಶಿಷ್ಯನ ಮನಸ್ಸು–ಇವುಗಳನ್ನು ಸಾಧನವಾಗಿ ಬಳಸಿಕೊಳ್ಳುವದರಿಂದಲೂ ವೇದಾಂತೋಪದೇಶಕ್ಕೆ ಅನುಕೂಲವು ಆಗುತ್ತದೆ. ಆದ್ದರಿಂದ ಈ ಕ್ರಮವನ್ನೇ ಉಪನಿಷತ್ತುಗಳಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

ಈ ಕ್ರಮದಿಂದ ಆತ್ಮೈಕತ್ವವಿದ್ಯೆಗೆ (ಆತ್ಮನೊಬ್ಬನೇ ಎಂಬ ತಿಳಿವಳಿಕೆಗೆ) ಯಾವ ಅಡ್ಡಿಯೂ ಉಂಟಾಗುವದಿಲ್ಲ. ನೆರಳು, ಪ್ರತಿಬಿಂಬ ಮುಂತಾದವುಗಳು ತೋರುವಾಗಲೂ ಅವು ನಿಜವಾಗಿರುವ ಪದಾರ್ಥಗಳೆಂದು ಯಾರೂ ನಂಬುವದಿಲ್ಲವಷ್ಟೆ? ಹಾಗೆಯೇ, ದೃಷ್ಟಾಂತಗಳು, ಪ್ರತ್ಯಕ್ಷಾದಿಪ್ರಮಾಣಗಳು, ಶಾಸ್ತ್ರವಚನಗಳು– ಮುಂತಾದವುಗಳು ಪರಮಾರ್ಥದೃಷ್ಟಿಯಿಂದ ಸತ್ಯವಲ್ಲವಾದ್ದರಿಂದ ಪರಮಾತ್ಮನೊಬ್ಬನೇ ಪರಮಾರ್ಥಸತ್ಯ ಎಂಬ ಸಿದ್ಧಾಂತಕ್ಕೆ ಯಾವ ಹಾನಿಯೂ ಆಗುವದಿಲ್ಲ. ಈ ಬೋಧನಕ್ರಮದಿಂದ ವ್ಯವಹಾರದಲ್ಲಿ ಸತ್ಯಮಿಥ್ಯಾದಿವಿಭಾಗವೂ, ಪ್ರಮಾಣಗಳೂ, ಶಾಸ್ತ್ರವಚನಗಳೂ ವ್ಯವಹಾರದ ಪ್ರಪಂಚದಲ್ಲಿ ನಿಜವಾಗಿಲ್ಲವೆಂದೂ ಆಗುವದಿಲ್ಲ. ಕನಸಿನಲ್ಲಿ ಕಾಣುವ ಪ್ರಮಾತೃಪ್ರಮಾಣಪ್ರಮೇಯವಿಭಾಗಗಳು ಎಚ್ಚರದ ದೃಷ್ಟಿಯಿಂದ ನೋಡಿದಾಗ ಮಿಥ್ಯೆಯೆಂದೇ ನಿಶ್ಚಿತವಾಗಿದ್ದರೂ ಕನಸಿನ ಸ್ಥಿತಿಯಲ್ಲಿ ಆ ವಿಭಾಗವೆಲ್ಲವನ್ನೂ ಪರಮಾರ್ಥವೆಂದೇ ಭಾವಿಸಿ ಹೇಗೆ ಜನರು ಆಗ ವ್ಯವಹರಿಸುವರೋ ಹಾಗೆಯೇ ಇದನ್ನೂ ತಿಳಿಯಬೇಕು. ಶಾಸ್ತ್ರಗಳಲ್ಲಿಯೂ ಬೋಧಕರ ಉಪದೇಶಗಳಲ್ಲಿಯೂ ವ್ಯವಹಾರವನ್ನು ಸಾಧನವಾಗಿಟ್ಟುಕೊಂಡಿದ್ದರೂ ಉಪದೇಶದ ಕೊನೆಯಲ್ಲಿ ಅದೆಲ್ಲವನ್ನೂ ಪರಮಾರ್ಥವಲ್ಲವೆಂದೇ ಸ್ಪಷ್ಟಪಡಿಸಲಾಗುತ್ತದೆ. ಈ ಕ್ರಮಕ್ಕೆ ಅಧ್ಯಾರೋಪಾಪವಾದನ್ಯಾಯವೆಂಬ ಹೆಸರನ್ನು ಕೊಡಲಾಗಿದೆ.

೨೨. ಈ ನ್ಯಾಯವನ್ನು ಅನುಸರಿಸಿ ಶಾಸ್ತ್ರದಲ್ಲಿ ವರ್ಣಿಸಿರುವ ಸೃಷ್ಟಿಸ್ಥಿತಿಪ್ರಲಯಗಳ ವರ್ಣನೆಯನ್ನೂ, ಜೀವೇಶ್ವರವಿಭಾಗವನ್ನೂ, ಈಗ ವಾಚಕರಿಗೆ ಸಂಗ್ರಹವಾಗಿ ತಿಳಿಯಿಸುವೆವು. ಬ್ರಹ್ಮವೊಂದೇ ಆದಿಯಲ್ಲಿದ್ದಿತು. ಅದರಿಂದಲೇ ಆಕಾಶ, ವಾಯು, ತೇಜಸ್ಸು (ಅಗ್ನಿ), ಅಪ್ಪು (ನೀರು), ಪೃಥಿವಿ (ಭೂಮಿ)– ಎಂಬ ಪಂಚಭೂತಗಳೂ ಅವುಗಳು ಒಂದರೊಡನೊಂದು ಬೆರೆತು ಆಗಿರುವ ಭೌತಿಕಪ್ರಪಂಚವೂ ಆಗಿದೆ. ಆ ಬ್ರಹ್ಮವು ಈ

ಪ್ರಪಂಚವನ್ನು ಸೃಷ್ಟಿಸಿ ಇದರೊಳಗೆ ಜೀವರೂಪದಿಂದ ಪ್ರವೇಶಿಸಿರುತ್ತದೆ. ಚೇತನಾಚೇತನರೂಪವಾದ ಜಗತ್ತೆಲ್ಲಕ್ಕೂ ಇದೇ ನಿಜವಾದ ಆತ್ಮನು. ಜಗತ್ತು ಉಂಟಾಗುವದಕ್ಕೆ ಮಡಕೆಗೆ ಮಣ್ಣಿನಂತೆ– ಪ್ರಕೃತಿಯು ಎಂದರೆ ಉಪಾದಾನಕಾರಣವೂ ಬ್ರಹ್ಮವೇ ; ಮಡಕೆಯನ್ನು ಮಾಡುವದಕ್ಕೆ ಅದರ ತಿಳಿವಳಿಕೆಯುಳ್ಳ ಕುಂಬಾರನಂತೆ, ಆ ಬ್ರಹ್ಮವೇ ನಿಮಿತ್ತಕಾರಣವು. ಹುಟ್ಟಿದ ಬಳಿಕ ಕಾರ್ಯವಸ್ತುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುವವನಂತೆ, ಈ ಬ್ರಹ್ಮವೆಂಬ ಹೆಸರಿನ ಪರಮಾತ್ಮನೇ ಜಗತ್ತಿನ ನಿಯಂತೃ (ವ್ಯವಸ್ಥೆಯು ಲ್ಲಿಟ್ಟುಕೊಂಡಿರುವವನು). ಬಳಿಕ ಕಲ್ಪಾಂತದಲ್ಲಿ ಈ ಜಗತ್ತು–ಮಡಕೆಯು ನಾಶವಾವಾಗ ಮಣ್ಣಿನಲ್ಲಿಯೇ ಸೇರುವಂತೆ ಬ್ರಹ್ಮದಲ್ಲಿಯೇ ಪ್ರಲಯವಾಗುವದು. ಹೀಗೇ ಚೇತನಾಚೇತನರೂಪವಾದ (ಅರಿವಿನ ಕರ್ತೃಭೋಕ್ತೃಗಳು, ಅರಿವಿಲ್ಲದ ವಸ್ತುಗಳು) ಜೀವರುಗಳು ಪರಮಾತ್ಮನಿಂದಲೇ ಹುಟ್ಟಿ, ಅವನ ಆಧಾರದಿಂದಲೇ ಇದ್ದು, ಅವನಲ್ಲಿಯೇ ಅಡಗುವವರಿಂದ ಆತನು ಸರ್ವಜ್ಞನೂ ( ತನ್ನ ಜ್ಞಾನರೂಪದಿಂದ ಎಲ್ಲವನ್ನೂ ಬೆಳಗುವವನೂ ), ಸರ್ವಶಕ್ತನೂ ( ಎಲ್ಲವೂ ಆಗಿ ತೋರುವ ಶಕ್ತಿಯುಳ್ಳವನೂ ) ಆಗಿರುವ ಈಶ್ವರನು.

೨೩. ಇಲ್ಲಿ ವ್ಯಾಂ ಲೋಕದಲ್ಲಿ ಇರುವ ಕಾರ್ಯಕಾರಣ ಭಾವವನ್ನೂ ಈಶ್ವರೇಶಿತವ್ಯ (ಒಡೆಯ, ಅವನ ವಶದಲ್ಲಿರುವವರು ಎಂಬ) ಸಂಬಂಧವನ್ನೂ ಪರಮಾರ್ಥದೃಷ್ಟಿಗೆ ಯಾವ ದೋಷವೂ ಅಂಟದಂತೆ ಹೇಳಿರುವದನ್ನು ಜಿಜ್ಞಾಸುಗಳೂ (ವೇದಾಂತತತ್ತ್ವವನ್ನು ತಿಳಿಯಬೇಕೆಂಬ ಇಚ್ಛೆಯುಳ್ಳವರು), ಮುಮುಕ್ಷುಗಳೂ (ಸಂಸಾರಬಂಧದಿಂದ ಬಿಡುಗಡೆಯಾಗಬೇಕೆಂಬ ಇಚ್ಛೆಯುಳ್ಳವರು) ಲಕ್ಷಿಸಬೇಕು.

ಒಂದನೆಯದಾಗಿ, ವ್ಯವಹಾರದೃಷ್ಟಿಯಿಂದ ನೋಡುವಾಗ ಪರಮೇಶ್ವರನು (ಎಲ್ಲರಿಗೂ ಒಡೆಯನಾದ ಪರಮಾತ್ಮನು). ಜಗತ್ತು ಮತ್ತೆ ಮತ್ತೆ ಹುಟ್ಟಿ ಸ್ವಲ್ಪಕಾಲ ಇದ್ದುಕೊಂಡು ಕೊನೆಗೆ ಪ್ರಲಯವಾಗುತ್ತಿರುವದರಿಂದ ಇದರಲ್ಲಿರುವ ಸಂಸಾರಿಗಳಾದ ಜೀವರುಗಳಿಗೆ ಅವರವರ ಕರ್ಮಕ್ಕನುಗುಣವಾಗಿ ಬೀಜದಿಂದ ಮೊಳಕೆಯುಂಟಾಗಿ ಮರವಾದಮೇಲೆ ಬಿದ್ದುಹೋಗುವದು, ಮತ್ತೆ ಅದರಿಂದ ಬೀಜವೂ ಅದರಿಂದ ಮೊಳಕೆಯೂ ಆಗುತ್ತಿರುವಂತೆ

ಹುಟ್ಟುಹೊಂದುಗಳನ್ನು ಕೊಡುತ್ತಿರುವನು. ಹೀಗೆ ಸಂಸಾರವು ಅನಾದಿಯಾಗಿರುತ್ತದೆ. ಈಶ್ವರನು ಜೀವರ ಕರ್ಮಗಳಿಗೆ ಅನುಸಾರವಾಗಿ ಅವರಿಗೆ ಬೇರೆಬೇರೆಯ ಜನ್ಮಗಳನ್ನೂ ಭೋಗಕ್ಕೆ ತಕ್ಕ ಶರೀರವನ್ನೂ ಭೋಗಸ್ಥಾನಗಳನ್ನೂ ಸೃಷ್ಟಿಸುತ್ತಿರುವ ... ತನಿಗೆ ಯಾವ ಸಾಧನಸಾಮಗ್ರಿಯೂ ಇಲ್ಲದಿದ್ದರೂ ತಾನೇ ಜಗದ್ರೂಪವಾಗಿ ತೋರಿಕೊಳ್ಳುತ್ತಲೂ ಇರುವನು. ಅನೇಕಜೀವರೂಪನಾಗಿ ... ಕ್ಕಿದ್ದರೂ ತನ್ನ ಪರಮಾರ್ಥಸ್ವರೂಪವು ಅಚ್ಚಳಿಯದೆ ಇರುವದರಿಂದ ಮಹಾಮಾಯಾವಿಯಂತೆ ಅಸಂಗನೂ ಸ್ವತಂತ್ರನೂ ಆಗಿರುವನು. ಲೀಲೆಯಿಂದ ಹೀಗಿರುವದೇ ಅವನ ಸ್ವಭಾವವಾಗಿರುತ್ತದೆ.

ಇನ್ನು ಎರಡನೆಯದಾಗಿ, ಪರಮಾರ್ಥದೃಷ್ಟಿಯಿಂದ ನೋಡುವಾಗ ಜಗತ್ತು ಬ್ರಹ್ಮದಿಂದ ಹುಟ್ಟಿ, ಅದರಿಂದಲೇ ತೋರಿಕೊಂಡು, ಅದರಲ್ಲಿಯೇ ಲಯವಾಗುವದರಿಂದ ಅದು ಬ್ರಹ್ಮಕ್ಕಿಂತ ಬೇರೆಯಲ್ಲ. ಜಗತ್ತಿಲ್ಲದರ ಪರಮಾರ್ಥವು ಬ್ರಹ್ಮವೇ ಆಗಿರುತ್ತದೆ. ಅದರ ಜಗದ್ರೂಪಾಕಾರತೋರಿಕೆಯು ಮಾಯಾಮಾತ್ರವಾಗಿರುತ್ತದೆ. ಆದ್ದರಿಂದ ಬ್ರಹ್ಮವೊಂದೇ ಪರಮಾರ್ಥವೆಂಬುದು ಸಿದ್ಧಾಂತವು.

೩೪. ಒಳಹೊಕ್ಕು ನೋಡಿದರೆ ಜಗತ್ತಿನೊಳಗೆ ದೇಶಕಾಲನಿಮಿತ್ತಗಳೂ ಅಡಕವಾಗಿಬಿಟ್ಟಿರುವವರಿಂದ ಜಗತ್ತಿನ ಹುಟ್ಟು, ಇರವು, ಲಯ-ಈ ಮೂರಕ್ಕೆ ಬ್ರಹ್ಮವು ಕಾರಣವೆಂಬ ಮಾತಿಗೆ ಅರ್ಥವೇ ಇರುವದಿಲ್ಲ. ಏಕೆಂದರೆ ಲೋಕದಲ್ಲಿ ಕಾರಣವೆಂದರೆ ಕಾರ್ಯಕ್ಕಿಂತ ಮುಂಚಿನಕಾಲದಲ್ಲಿ ಗೊತ್ತಾಗಿ ಇದ್ದೇಇರುವ ಪದಾರ್ಥ. ಆದರೆ, ಕಾಲದೇಶಗಳಿಂದ ಕೂಡಿದ ಜಗತ್ತಾಗುವದಕ್ಕಿಂತ ಪೂರ್ವದಲ್ಲಿ ಬ್ರಹ್ಮವು ಇರುವದೆಂಬುದು ಹೇಗೂ ಹೊಂದಲಾರದು. ಬ್ರಹ್ಮವು ಕಾಲದ ಆಶ್ರಯದಲ್ಲಿಲ್ಲ. ಕಾಲದಿಂದ ಕೂಡಿಕೊಂಡಿರುವ ಜಗತ್ತೂ ಕಾಲದ ಆಶ್ರಯದಲ್ಲಿಲ್ಲ; ಹೀಗಿರುವಲ್ಲಿ ಜಗತ್ತಿಗೂ ಬ್ರಹ್ಮಕ್ಕೂ ಕಾರ್ಯಕಾರಣಭಾವವು ಹೇಗೆ ಹೊಂದೀತು ? ಆದರೂ ಶ್ರುತಿಯು ಹೇಳುವಂತೆ ಸಕಲಭೂತಗಳಿಂದೊಡಗೂಡಿರುವ ಜಗತ್ತು ಬ್ರಹ್ಮದಿಂದ ಹುಟ್ಟುವ ಕಾರ್ಯವೆಂಬುದಕ್ಕೆ ಇನ್ನೊಂದು ಅರ್ಥವಿರಬೇಕಾಯಿತಷ್ಟೆ ? ಹಾಗೆ ಇದ್ದೇಇದೆ. ಬ್ರಹ್ಮವೆಂದರೆ ಜಗತ್ತಿನ ನಿಜವಾದ ಆತ್ಮನಾದ ಸಾಕ್ಷಿಯು;

ಆದರಲ್ಲಿಯೇ ಅವಿದ್ಯಾಖ್ಯ ಹಾರದೃಷ್ಟಿಯಿಂದ ಜಗತ್ತು ತೋರುತ್ತಿರುವದರಿಂದ ಬ್ರಹ್ಮದಲ್ಲಿ ಅಂದರೆ ನಿಜವಾದ ಆತ್ಮನಲ್ಲಿ ಜಗತ್ತು ಅವಿದ್ಯೆಯಿಂದ ತೋರುತ್ತಿರುತ್ತದೆ; ಅಧ್ಯಾಸವಾಗಿದೆ ಎಂಬರ್ಥದಲ್ಲಿ ಜಗತ್ತನ್ನು ಕಾರ್ಯವೆಂದೂ ಬ್ರಹ್ಮವನ್ನು ಕಾರಣವೆಂದೂ ಔಪಚಾರಿಕವಾಗಿ ಕರೆದಿದೆ, ಎಂದರಿಯಬೇಕು. ಇದು ಅಧ್ಯಾರೋಪದೃಷ್ಟಿಯಿಂದ ಹೇಳಿದ್ದು.

ಸರಿಯಾಗಿ ನೋಡಿದರೆ ಲೋಕದಲ್ಲಿಯೂ ಉಪಾದಾನಕಾರಣದಲ್ಲಿ ಅಧ್ಯಸ್ತ(ಕಲ್ಪಿತ)ವಾಗಿರುವದರಿಂದಲೇ ಮಣ್ಣು ಮುಂತಾದವು ಕಾರಣವೆಂದೂ ಮಡಕೆ, ಕುಡಿಕೆ- ಮುಂತಾದವುಗಳು ವಿಕಾರ (ಕಾರ್ಯ)ವೆಂದೂ ವ್ಯವಹರಿಸಲ್ಪಡುತ್ತವೆ. ಜನರು ಈ ತತ್ತ್ವವನ್ನು ಲಕ್ಷಿಸದೆ ಮಣ್ಣು ಮೊದಲಿದ್ದುಕೊಂಡು ಮತ್ತೊಂದು ಕಾಲಕ್ಕೆ ಮಡಕೆಯಾಗುವದೆಂದು ಅವಿದ್ಯೆಯಿಂದ ಕಲ್ಪಿಸಿರುತ್ತಾರೆ. ಆದ್ದರಿಂದಲೇ ಶ್ರುತಿಯಲ್ಲಿ ವಿಕಾರ(ಕಾರ್ಯ)ವೆಂಬುದು ಬರಿಯ ಮಾತಿನ ಆಟ, ಅದು ಹೆಸರುಮಾತ್ರ; ಸರಿಯಾಗಿ ನೋಡಿದರೆ ಮಣ್ಣು ಯಾವಾಗಲೂ ಮಣ್ಣೇ (ಛಾಂ.) ಎಂದು ಹೇಳಿರುತ್ತದೆ.

೨೫. ಈ ದೃಷ್ಟಿಯಿಂದ ನೋಡಿದರೆ ಸೃಷ್ಟಿಯಾದಮೇಲೆಯೇ ನಾಮರೂಪಗಳಿಂದ ಬಿಡಿಬಿಡಿಯಾಗಿರುವ ಜಗತ್ತೇ ಪ್ರಲಯದಲ್ಲಿಯೂ ಬೀಜರೂಪವಾಗಿ ಇದ್ದೇ ಇರಬೇಕು - ಎಂದಾಗುವದು. ಹೀಗೆ ವ್ಯವಹಾರದೃಷ್ಟಿಯಿಂದ ನಾವು ಊಹಿಸುವ ಜಗತ್ತಿನ ಅವ್ಯಾಕೃತ(ನಾಮರೂಪಗಳ ವಿಂಗಡವಿಲ್ಲದ) ಬೀಜವಾಗಲಿ ಶಕ್ತಿಯಾಗಲಿ ಬ್ರಹ್ಮಕ್ಕಿಂತ ಬೇರೆಯಾಗಿ ಇಲ್ಲವೇ ಇಲ್ಲ. ಅವಿದ್ಯೆಯಿಂದ ಕಲ್ಪಿತವಾದ ನಾಮರೂಪವು ತಾನು ತೋರುವ ರೂಪದಿಂದ ಬ್ರಹ್ಮಕ್ಕಿಂತ ಬೇರೆಯೆಂದಾಗಲಿ, ಅದೇ ಬ್ರಹ್ಮವೇ ಎಂದಾಗಲಿ ಹೇಳುವದಕ್ಕೆ ಬಾರದ್ದಾಗಿರುವದರಿಂದ ಅದನ್ನು ಅನಿರ್ವಚನೀಯವೆನ್ನುವರು. ನಾಮರೂಪಗಳ ಪ್ರಕೃತಿಯನ್ನು-ಎಂದರೆ ಜಗತ್ತಿನ ಮೂಲರೂಪವನ್ನು ಮಾಯೆ ಎಂದೂ ಶ್ರುತಿಯಲ್ಲಿ ಕರೆದಿದೆ. ಪರಮಾತ್ಮನು ಮಾತ್ರ ಈ ನಾಮರೂಪಬೀಜಕ್ಕಿಂತಲೂ ಬೇರೆಯಾಗಿ ಸ್ವತಂತ್ರನಾಗಿರುತ್ತಾನೆ. ಹಗ್ಗದಲ್ಲಿ ಜನರು ಭ್ರಾಂತಿಯಿಂದ ಕಲ್ಪಿಸಿದ ಹಾವೆಂಬ ರೂಪವು ತೋರಿಕೊಳ್ಳುತ್ತಿರುವಾಗ- ಅದು ಹಗ್ಗವೂ ಅಲ್ಲದೆ ಅದಕ್ಕಿಂತ ಬೇರೆಯೂ ಅಲ್ಲವಾಗಿದ್ದು ಹಗ್ಗದಲ್ಲಿ ಕಲ್ಪಿತವಾಗಿರುವ ತೋರಿಕೆಮಾತ್ರವೇ ಅಲ್ಲವೆ?

ಹೀಗೆಯೇ ಬ್ರಹ್ಮದಲ್ಲಿ ಅವಿದ್ಯೆಯಿಂದ (ವ್ಯವಹಾರದೃಷ್ಟಿಯಿಂದ) ಕಲ್ಪಿಸಿರುವ ವ್ಯಾಕೃತವೂ ಅವ್ಯಾಕೃತವೂ ಆದ ಈ ಮಾಯೆಯೂ ಇದರ ಕಾರ್ಯವಾದ ವ್ಯಾಕೃತನಾಮರೂಪಲಕ್ಷಣವಾದ ಜಗತ್ತೂ ಬ್ರಹ್ಮದ ಕಲ್ಪಿತ ರೂಪಭೇದನೇ. ಇದು ಅವಿದ್ಯಾಕಲ್ಪಿತವಾದ ರೂಪವಾಗಿರುವದರಿಂದ ಬ್ರಹ್ಮವೊಂದೇ ಯಾವಾಗಲೂ ಪರಮಾರ್ಥವಾಗಿರುತ್ತದೆ.

೨೭. ಬ್ರಹ್ಮವೇ ಈ ಜಗತ್ತಿನಲ್ಲಿ ಜೀವರೂಪದಿಂದ ಹೊಕ್ಕಿರುತ್ತದೆ ಯೆಂದು ಶ್ರುತಿಯಲ್ಲಿ ಹೇಳಿರುವದರ ಅರ್ಥವೇನು ? ಆಕಾಶವೊಂದೇ ಇದ್ದರೂ ಅದೇ ವಾಯ್ವಾದಿರೂಪಗಳ ಕ್ರಮದಿಂದ ಪೃಥಿವಿಯಾಗಿಯೂ ಪ್ರಧಾನ ಕಾರ್ಯವಾದ ಜಗತ್ತಾಗಿಯೂ ಪರಿಣಮಿಸಿದಂತೆ ಅಜ್ಞರಿಗೆ ಕಾಣುತ್ತಿರುವದು. ಈ ವ್ಯವಹಾರದೃಷ್ಟಿಯಿಂದ ಘಟಾಕಾಶ, (ಗಡಿಗೆಯೊಳಗಿನ ಆಕಾಶ) ಮಹಾಕಾಶ (ತಾನು ಇರುವಂತೆ ಇರುವ ನಿಜವಾದ ಆಕಾಶ)– ಎಂಬ ಭೇದವು ತೋರುತ್ತಿರುವಂತೆ, ಅವಿದ್ಯೆಯಿಂದ ಪರಮಾತ್ಮನಲ್ಲಿ ಕಲ್ಪಿತವಾದ ನಾಮರೂಪಗಳ ಕಾರ್ಯವಾದ ಕಾರ್ಯಕರಣ (ದೇಹೇಂದ್ರಿಯ)ಗಳು ಉಂಟಾಗಿರುವವು. ಗಡಿಗೆಯೆಂಬ ಉಪಾಧಿಯಿಂದ ಬೇರೆಯಾಗಿರುವಂತೆ ಕಾಣುವ ಘಟಾಕಾಶದಂತೆ– ಕಾರ್ಯಕರಣಗಳಲ್ಲಿ ನಾನು, ನನ್ನದು ಎಂಬ ಅಭಿಮಾನವಿಟ್ಟುಕೊಂಡಿರುವ ಆತ್ಮನು ವಿಜ್ಞಾನಾತ್ಮನು, ಜೀವನೆನಿಸುವನು. ದೃಷ್ಟಾಂತದಲ್ಲಿ ಎಲ್ಲವೂ ಆಕಾಶವೇ ಆಗಿರುವಂತೆ ದಾರ್ಷ್ಟಾಂತಿಕವಾದ ಈ ವೇದಾಂತವ್ಯವಹಾರದಲ್ಲಿಯೂ ಅದ್ವಿತೀಯ (ತನಗೆರಡನೆಯದಿಲ್ಲದ) ವಾದ ಬ್ರಹ್ಮದಲ್ಲಿ ನಾಮರೂಪಗಳೆಂಬ ಉಪಾಧಿಯಿಂದ ಈಶ್ವರ, ದೇಹೇಂದ್ರಿಯಗಳೆಂಬ ಉಪಾಧಿಯಿಂದ ಜೀವ– ಎಂಬ ವ್ಯವಹಾರವಾಗಿರುತ್ತದೆ. ಈ ದೃಷ್ಟಿಯಿಂದ ಈಶ್ವರ, ಈಶಿತವ್ಯ– ಎಂಬ ವ್ಯಾವಹಾರಿಕವಾದ ಭೇದವಿರುವದು ನಿಜವಾದರೂ ಬ್ರಹ್ಮವು ಪಾರಮಾರ್ಥಿಕವಾಗಿ ತಾನೊಂದೇ ಇದ್ದಂತೆಯೇ ಇರುತ್ತದೆ.

೩೭. ಈಶ್ವರನಿಗೆ ವ್ಯಾಕೃತವಾದ ಅಥವಾ ಅವ್ಯಾಕೃತವಾದ ನಾಮರೂಪಗಳೆಂಬ ಉಪಾಧಿಯಿದ್ದರೂ, ಜೀವನಿಗೆ ಕಾರ್ಯಕರಣಸಂಘಾತ, ಅಂದರೆ ದೇಹೇಂದ್ರಿಯಗಳ ಒಟ್ಟು ಎಂಬ ಉಪಾಧಿಯಿದ್ದರೂ, ಆ ಉಪಾಧಿಗಳು ಈಶ್ವರ (ಆಳುವವನು) ಈಶಿತವ್ಯ ( ಆಳಲ್ಪಡುವದು ) ಎಂಬ ವ್ಯಾವಹಾರಿಕವಾದ ಆಪೇಕ್ಷಿಕ (ಹೋಲಿಕೆಯ) ಸಂಬಂಧವನ್ನುಂಟುಮಾಡಿರುವಂತೆ

ತೋರುವಾಗಲೂ- ಘಟಾಕಾಶ (ಗಡಿಗೆಯ ಬಯಲು), ಮಠಾಕಾಶ (ವಿದ್ಯಾಶಾಲೆಯೊಳಗಿನ ಬಯಲು) ಎಂಬ ವ್ಯವಹಾರದಂತೆಯೂ ಒಬ್ಬನೇ ಚಂದ್ರನು ಕಣ್ಣುಪರೆಯಿಂದ ಎರಡನೆಯ ಚಂದ್ರನಿರುವಂತೆ ಇದಾನೆ ಎಂಬ ವ್ಯವಹಾರದಂತೆಯೂ-ವ್ಯವಹಾರಕ್ಕಾಗಿ ಆಗಿರುವ ಶಬ್ದಪ್ರಯೋಗವೇ ಹೊರತು ಪರಮಾರ್ಥವಾಗಿ ಈ ಭೇದವೇನೂ ಇರುವದಿಲ್ಲ. ಒಂದು ಕೋಲು ಇನ್ನೊಂದಕ್ಕಿಂತ ಸಣ್ಣದು, ಅಥವಾ ದೊಡ್ಡದು ಎಂಬ ವ್ಯವಹಾರದಂತೆ ಇದು ಆಪೇಕ್ಷಿಕ (Relatively)ವೇ ಹೊರತು ವಸ್ತುವಿನಲ್ಲಿ ನಿಜವಾಗಿ, ಈಶ್ವರತ್ವ, ಈಶಿತವ್ಯತ್ವ, ಜೀವತ್ವ-ಎಂಬ ಧರ್ಮವೇನೂ ಬಂದಿರುವದಿಲ್ಲ. ಹೀಗೆ ಉಪಾಧಿ ಎಂಬುದು ವ್ಯವಹಾರಕ್ಕಾಗಿ ಒಂದು ವಸ್ತುವನ್ನು ತಿಳಿಯಿಸುವಕ್ಕೆ ಅನುಕೂಲವಾಗಿದ್ದರೂ ನಿಜವಾಗಿ ಆ ವಸ್ತುವಿಗೇ ಸೇರಿಕೊಂಡಿರುವದಿಲ್ಲ. ಒಂದು ದೇಶಕ್ಕೂ ಇನ್ನೊಂದು ದೇಶಕ್ಕೂ ಇರುವ ಮೇರೆಯ ರೇಖೆಯನ್ನು ಯಾವ ದೇಶಕ್ಕೂ ಸೇರಿಲ್ಲವೆಂದು ಒಪ್ಪಿ ದೇಶಗಳನ್ನು ಬೇರೆಬೇರೆಯೆಂದು ಗುರುತಿಸುವವಕ್ಕೆ ಹೇಗೆ ಉಪಯೋಗಿಸಿಕೊಳ್ಳುವರೋ ಹಾಗೇಯೇ ಇದು. ಹೀಗೆ ಉಪಾಧಿಯು ತಾನು ಗುರುತಿಸಿ ತಿಳಿಯಿಸುವದಾಗಿದ್ದರೂ ಆ ವಸ್ತುವಿಗೇ ಸೇರಿದ ಧರ್ಮವಾಗಿರುವದಿಲ್ಲ. ಆದ್ದರಿಂದ ಈಶ್ವರನು ಸರ್ವಜ್ಞ (ಎಲ್ಲವನ್ನೂ ಅರಿವಿನಿಂದ ಬೆಳಗುವವನು), ಜೀವನು ಕಿಂಚಿಜ್ಞ (ಪರಿಚ್ಛಿನ್ನಜ್ಞಾನವುಳ್ಳವನು)- ಎಂಬ ತಾರತಮ್ಯವೂ, ಈಶ್ವರನು ಸರ್ವಶಕ್ತ, ಜೀವನು ಅಲ್ಪವಾದ ಪರಿಮಿತಿಯ (ಅಳತೆಯ) ಶಕ್ತಿಯುಳ್ಳವನು ಎಂಬುದೂ ವ್ಯವಹಾರದ ದೃಷ್ಟಿಯಿಂದ ಇಟ್ಟುಕೊಂಡಿರುವ ತಾರತಮ್ಯವೇ ಆಗಿರುತ್ತದೆ. ಪರಮಾರ್ಥದೃಷ್ಟಿಯಿಂದ ನೋಡಿದಾಗ ತತ್ತ್ವವು, ಪರಮಾರ್ಥಸತ್ಯವು ಒಂದೇ ಇದೆ ; ಅದು ಸನ್ಮಾತ್ರ (ಬರಿಯ ಇರವು), ಚಿನ್ಮಾತ್ರ (ಬರಿಯ ಅರಿವು)ವೇ ಆಗಿದೆ. ಬೆಂಕಿಗೆ ಬಿಸಿ, ಬೆಳಕು- ಎಂದು ಕಲ್ಪಿಸಿದ ಎರಡೂ ಧರ್ಮಗಳು ಅದರ ಸ್ವರೂಪವನ್ನೇ ಹೇಳುವಂತೆ ಬ್ರಹ್ಮದ ಅಥವಾ ಆತ್ಮನ ಸ್ವರೂಪವೊಂದನ್ನೇ ಈ ಶಬ್ದಗಳು ತಿಳಿಯಿಸುತ್ತವೆ.

೨೮ ಸ್ಫಟಿಕವು ತನ್ನ ಹತ್ತಿರವಿರುವ ದಾಸವಾಳದ ಹೂವು, ಹಸಿರು ಎಲೆ- ಮುಂತಾದ ಉಪಾಧಿಗಳಿಂದ ಕೆಂಪು, ಹಸಿರು- ಎಂದುಮುಂತಾಗಿ ಕಾಣಿಸುತ್ತಿದ್ದರೂ ನಿಜವಾಗಿ ಅದು ಯಾವಾಗಲೂ ಸ್ವಚ್ಛವಾಗಿ ಯಾವ

ಬಣ್ಣವೂ ಇಲ್ಲವೆಯೇ ಹೇಗೆ ಇರುವದೋ, ಹಾಗೆಯೇ ಬ್ರಹ್ಮಾತ್ಮವಸ್ತುವಿಗೆ ಉಪಾಧಿಯಿಂದ ಕಾಣುವ ಈಶ್ವರತ್ವ, ಜೀವತ್ವ, ಸರ್ವಜ್ಞತ್ವ, ಕಿಂಚಿಜ್ಜ್ಞತ್ವ, ಸರ್ವಶಕ್ತಿತ್ವ ಅಲ್ಪಶಕ್ತಿತ್ವ- ಮುಂತಾದ ಯಾವ ಧರ್ಮವೂ ಇಲ್ಲದ್ದರಿಂದ ಅದು ಯಾವಾಗಲೂ ಇದ್ದಂತೆಯೇ ಇರುತ್ತದೆ. ಇದೂ ಅಲ್ಲದೆ ನಾವು ಹಿಂದೆಯೇ ಹೇಳಿರುವಂತೆ ಜನರಿಗೆ ಸ್ವಾಭಾವಿಕವಾಗಿದ್ದುಕೊಂಡಿರುವ ಅಧ್ಯಾಸರೂಪವಾದ ಅವಿದ್ಯೆಯಿಂದಲೇ ನಾಮರೂಪಗಳೂ, ನಾಮರೂಪಗಳ ಕಾರ್ಯವಾದ ದೇಹೇಂದ್ರಿಯಸಂಘಾತಗಳೆಂಬ ಉಪಾಧಿಗಳೂ ಕಲ್ಪಿತವಾಗಿರುವದರಿಂದ- ನಿದ್ರಾದೋಷದಿಂದ ಕಲ್ಪಿತವಾಗಿರುವ ಕನಸಿನ ತೋರಿಕೆಗಳಂತೆ-ಆ ಉಪಾಧಿಗಳು ಬರಿಯ ಹುಸಿತೋರಿಕೆಗಳಾಗಿರುತ್ತವೆ- ಎಂಬುದೇ ಕಟ್ಟಕಡೆಯ ಸಿದ್ಧಾಂತ (ತೀರ್ಪು). ಆದ್ದರಿಂದ ಶ್ರುತಿಗಳು ಬ್ರಹ್ಮಕ್ಕಿಂತ ಎರಡನೆಯ ವಸ್ತುವು ಯಾವದೂ ಇಲ್ಲ. ಅದು ನಿರ್ಗುಣ (ಗುಣಗಳಿಲ್ಲದ್ದು), ನಿರ್ಧರ್ಮಕ (Having no Property), ನಿರ್ವಿಕಲ್ಪಕ (ಇದು ಇಂಥದೆಂದು ಕಲ್ಪಿಸುವದಕ್ಕೆ ಬಾರದ ತತ್ತ್ವ)-ಎಂದು ಸಾರುತ್ತಿರುವವು. ಭಗವದ್ಗೀತೆಯಲ್ಲಿ ಯಾರೊಬ್ಬರಿಗೂ ಕರ್ತೃತ್ವ, ಕ್ರಿಯೆ, ಕ್ರಿಯಾಫಲಸಂಯೋಗ -ಎಂಬುವದಿಲ್ಲ, ಈಶ್ವರನು ಜೀವರು ಮಾಡುವ ಕರ್ಮಗಳನ್ನು ಒಪ್ಪಿಸಿಕೊಳ್ಳುವನೆಂಬುದೇ ಇಲ್ಲ (ಗೀ. ೫-೧೪, ೧೫) ಎಂದು ಹೇಳಿರುತ್ತದೆ.

೨೯. ಹೀಗಿದ್ದರೂ, 'ಪರಮೇಶ್ವರನು ಸತ್ಯಕಾಮನು, ಸತ್ಯಸಂಕಲ್ಪನು ಪಾಪರಹಿತನು, ಎಲ್ಲಾ ಜೀವರ ಆತ್ಮನು', 'ಇದೆಲ್ಲವೂ ಬ್ರಹ್ಮವೇ ; ಆ ಬ್ರಹ್ಮದಿಂದಲೇ ಹುಟ್ಟಿ, ಇದ್ದು, ಅದರಲ್ಲಿಯೇ ಅಡಗುವದು' (ಛಾಂ.) ಎಂದು ಮುಂತಾಗಿಯೂ ಬ್ರಹ್ಮವನ್ನು 'ಈತನು ಪರಮೇಶ್ವರನು, ಸರ್ವಭೂತಗಳಿಗೂ ಒಡೆಯನು, ಎಲ್ಲಾ ಪ್ರಾಣಿಗಳನ್ನೂ ಕಾಪಾಡುವಾತನು, ಜೀವರ ಧರ್ಮಗಳ ವ್ಯವಸ್ಥೆಯನ್ನು ಮಾಡುವಾತನು' (ಬೃ. ೪-೪ ೨೨) ಎಂದು ಮುಂತಾಗಿಯೂ ಶ್ರುತಿವಾಕ್ಯಗಳಲ್ಲಿ ಬ್ರಹ್ಮವನ್ನು ಈಶ್ವರನೆಂದು ಕರೆದು ಆತನಿಗೆ ಕೆಲವು ವಿಶೇಷಣಗಳನ್ನು ಕೊಟ್ಟಿರುವದು ವ್ಯವಹಾರದೃಷ್ಟಿಯಿಂದಲೇ - ಎಂದರಿಯಬೇಕು. ಉಪಾಸಕರಿಗೆ, ಧ್ಯಾನಕ್ಕೆ ಅನುಕೂಲವಾಗಲೆಂದೇ ವೇದಾಂತಶಾಸ್ತ್ರವ್ಯವಹಾರದೃಷ್ಟಿಯಿಂದ ಈಶ್ವರನೇ ಎಲ್ಲಾ ಜಗತ್ತಾಗಿ ಪರಿಣಮಿಸಿ, ಈಶ್ವರರೂಪದಿಂದಲೂ ಇದ್ದುಕೊಂಡಿರುತ್ತಾನೆ ಎಂದಿರುತ್ತದೆ. ಆದ್ದರಿಂದ ಬ್ರಹ್ಮದ

ಕಾರ್ಯವಾದ ನಾಮರೂಪಜಗತ್ತಿನ ಧರ್ಮಗಳನ್ನು ಈಶ್ವರನ ವಿಶೇಷಣಗಳೆಂದು ಹೇಳಿರುವದು ಸರಿಯೇ ಆಗಿರುತ್ತದೆ; ಉಪಾಧಿಯಂತೆ ವಿಶೇಷಣವೂ (ಧರ್ಮವೂ ಅಥವಾ ಗುಣವೂ) ಈಶ್ವರನಿಗೆ ಸೇರಿದ ಪರಿಚಾಯಕವಾದ (ಅವನ್ನು ಗುರುತಿಸುವದಕ್ಕೆ ಅನುಕೂಲಿಸುವ) ಬರಿಯ ಎಲ್ಲಿಕಟ್ಟು ; ದಾಸವಾಳವು ಕೆಂಪು—ಎನ್ನುವಾಗ ಹೇಗೆ ಕೆಂಪು ಎಂಬ ಗುರುತು ಆ ಹೂವಿಗೇ ಸೇರಿಕೊಂಡಿದೆಯೋ ಹಾಗೆಯೇ ಇದೂ ಈಶ್ವರನಿಗೆ ಸೇರಿಕೊಂಡೇ ಇರುವ ಧರ್ಮವಾಗಿರುತ್ತದೆ. ಉಪಾಸನೆಗಾಗಿ ವಿಧಿಸಿರುವ ಈ ವಿಶೇಷಣ(ಗುಣ ಅಥವಾ ಧರ್ಮ)ಗಳನ್ನು ಈಶ್ವರನಂತೆಯೇ ಧ್ಯಾನಿಸಬೇಕು ; ಆದರಿಂದಲೇ ಶಾಸ್ತ್ರದಲ್ಲಿ ಹೇಳಿರುವ ಫಲವುಂಟಾಗುತ್ತದೆ. ಈ ಸಂದರ್ಭದಲ್ಲಿ ಹೇಳಿರುವ ಬ್ರಹ್ಮವನ್ನು ಅಪರಬ್ರಹ್ಮ (ಕೆಳಗಿನ ಹಂತದ ಬ್ರಹ್ಮ) ಸಗುಣಬ್ರಹ್ಮ (ಬೇರೆಬೇರೆಯ ಗುಣಗಳುಳ್ಳ ಬ್ರಹ್ಮ) ಎಂದೂ ಕರೆಯುವದುಂಟು. ಉಪಾಸಕರು ದೇವಯಾನ ಅಥವಾ ಉತ್ತರಾಯಣಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗಿ ಪಡೆಯತಕ್ಕ (ಪ್ರಾಪ್ಯ)ದ್ದಾದ್ದರಿಂದ ಈ ಬ್ರಹ್ಮವನ್ನು ಕಾರ್ಯಬ್ರಹ್ಮ ಎನ್ನುವದೂ ಉಂಟು ; ಆದರೆ ಪರಮಾರ್ಥಜ್ಞಾನದಿಂದ ಇಲ್ಲಿಯೇ ನಮ್ಮ ಆತ್ಮನೆಂದು ತಿಳಿಯಬರುವ ಪರಬ್ರಹ್ಮ, ಶುದ್ಧ, (ನಿರ್ಗುಣ)ಬ್ರಹ್ಮ, ಕಾರಣಬ್ರಹ್ಮ—ಎಂಬ ಹೆಸರಿನಿಂದ ತಿಳಿಯಬರುವ ಬ್ರಹ್ಮಕ್ಕೂ ಉಪಾಸ್ಯ ಬ್ರಹ್ಮಕ್ಕೂ ಸ್ವರೂಪದಲ್ಲಿ ಯಾವ ತಾರತಮ್ಯವೂ ಇಲ್ಲ. ಆದ್ದರಿಂದ 'ಅಪರ ಬ್ರಹ್ಮ' (ಕೀಳುಹಂತದ ಬ್ರಹ್ಮ) ಎಂಬುದು ಸಾಧನೆಯ ದೃಷ್ಟಿಯಿಂದ ಹೇಳಿದ್ದೇ ಹೊರತು ಬ್ರಹ್ಮದಲ್ಲಿ ತಾರತಮ್ಯವಿದೆಯೆಂಬ ಅಭಿಪ್ರಾಯದಿಂದಲ್ಲ—ಎಂಬುದನ್ನು ನೆನಪಿನಲ್ಲಿಡಬೇಕು.

೩೦. ಶಾರೀರ, ಜೀವ, ವಿಜ್ಞಾನಾತ್ಮ, ಜಂತು, ಸಂಸಾರಿ—ಎಂದು ಬಗೆಬಗೆಯಾಗಿ ಕರೆಯಿಸಿಕೊಳ್ಳುವ ಮನುಷ್ಯರು ಲೌಕಿಕಕರ್ಮಗಳಿಂದ ಆಯಾ ಫಲಗಳನ್ನು ಪಡೆಯುವಂತೆಯೇ ಶಾಸ್ತ್ರದಲ್ಲಿ ನಿಷಿದ್ಧವಾಗಿರುವ (ಮಾಡಬಾರದೆಂದಿರುವ)ಕರ್ಮಗಳಿಂದ ಅನಿಷ್ಟಫಲಗಳನ್ನೂ ವಿಧಿಸಿರುವ (ಮಾಡಬೇಕೆಂದಿರುವ) ಕಾಮ್ಯಕರ್ಮಗಳಿಂದ ಆಯಾ ಕಾಮ್ಯಭೋಗಗಳನ್ನೂ ಪಡೆಯುತ್ತಾರೆ. ಶ್ರುತಿಸ್ಮೃತಿಗಳಲ್ಲಿ ವಿಧಿಸಿರುವ ನಿತ್ಯನೈಮಿತ್ತಿಕಕರ್ಮಗಳಿಂದ ತಮ್ಮ

ತಮ್ಮ ವರ್ಣಾಶ್ರಮಗಳಿಂದ ಪತಿತರಾಗದೆ ಇರುತ್ತಾರೆ. ಅವುಗಳನ್ನು ಈಶ್ವರಾರಾಧನೆಗೆಂದು ಮಾಡಿದರೆ ಚಿತ್ತಶುದ್ಧಿ ( ಪಾಪವು ಕ್ಷಯವಾಗುವಿಕೆ )ಯನ್ನು ಪಡೆದುಕೊಳ್ಳುತ್ತಾರೆ. ಕರ್ಮಸಂನ್ಯಾಸವನ್ನು ಮಾಡಿ ಭಕ್ತಿಯಿಂದ ಗೀತೆಯ ಎಂಟನೆಯ ಅಧ್ಯಾಯದಲ್ಲಿ ಹೇಳಿರುವ ಧಾರಣಾಯೋಗವನ್ನು ಮಾಡಿದರೆ ಆ ಭಾವನೆಯಿಂದ ಲೋಕಾಂತರದಲ್ಲಿ ಪರಮಾತ್ಮನನ್ನು ಸೇರುತ್ತಾರೆ. ಕರ್ಮಸಂನ್ಯಾಸವನ್ನು ಮಾಡಿ ಆಧ್ಯಾತ್ಮಯೋಗ (ಅಥವಾ ಭಗವದ್ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳಿರುವ) ಧ್ಯಾನಯೋಗವನ್ನು ಮಾಡಿದರೆ ಪರಭಕ್ತಿ (ಜ್ಞಾನನಿಷ್ಠೆಯಿಂದ) ಎಲ್ಲೆಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಸಮನಾಗಿದ್ದುಕೊಂಡಿರುವ ನಿರ್ವಿಕಲ್ಪಬ್ರಹ್ಮದಲ್ಲಿಯೇ ಬೆರೆತುಹೋಗುತ್ತಾರೆ. ಶಾಸ್ತ್ರದಲ್ಲಿ ಹೇಳಿರುವಂತೆ ವಿವಿಧಪ್ರಕಾರಗಳಿಂದ ಪರಮಾರ್ಥತತ್ತ್ವವನ್ನು ಸಾರ್ವತ್ರಿಕಾನುಭವ (ಎಲ್ಲರಿಗೂ ಯಾವಾಗಲೂ ಆಗುವ ಹಾಗೂ ಅನುಭವಕ್ಕನುಗುಣವಾದ) ತರ್ಕದಿಂದ ತತ್ತ್ವವಿಚಾರವನ್ನು ಮಾಡಿದರೆ ಸಾಂಖ್ಯದಿಂದ, ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸರೂಪವಾದ ಅವಿದ್ಯೆಯನ್ನು ತೊಲಗಿಸಿಕೊಂಡು ತಾವು ನಿತ್ಯಶುದ್ಧಬುದ್ಧಮುಕ್ತಸ್ವರೂಪರೇ ಆದ ಪರಬ್ರಹ್ಮವೇ ಎಂದೆಂದಿಗೂ ಆಗಿರುವೆವೆಂಬ ಪರಮಾನುಭವವನ್ನು ಪಡೆದು ಸದ್ಯೋಮುಕ್ತಿಯನ್ನು ಪಡೆಯುತ್ತಾರೆ.

ಈ ವೇದಾಂತಸಿದ್ಧಾಂತವನ್ನು ಸಂಗ್ರಹವಾಗಿ ತಿಳಿಯಿಸುವ ನೆಪದಿಂದ ನಾವು ಇಲ್ಲಿ ಅಧ್ಯಾತ್ಮಶಾಸ್ತ್ರದಲ್ಲಿ ಆಗಾಗ್ಗೆ ಬಳಸುವ ಮುಖ್ಯಪಾರಿಭಾಷಿಕ ಶಬ್ದಗಳನ್ನು ಪ್ರಯೋಗಿಸಿ ಅಲ್ಲಲ್ಲಿಯೇ ಅವುಗಳ ಅರ್ಥವನ್ನು ತಿಳಿಯಿಸುತ್ತಾ ಬಂದಿರುತ್ತೇವೆ. ಈ ಪ್ರಕರಣವನ್ನು ಓದಿ ಅಧ್ಯಾತ್ಮವಿದ್ಯೆಯನ್ನು ಸವಿಸ್ತರವಾಗಿ ಬೋಧಿಸುವ ಉಪನಿಷತ್ತುಗಳು, ಭಗವದ್ಗೀತೆ, ವೇದಾಂತಮೀಮಾಂಸೆ (ಅಥವಾ ಶಾರೀರಕಮೀಮಾಂಸೆ) ಎಂಬ ಪ್ರಸ್ಥಾನತ್ರಯಗ್ರಂಥಗಳ ಅಭ್ಯಾಸಕ್ಕೆ ಸಿದ್ಧತೆಯನ್ನು ಮಾಡಿಕೊಳ್ಳುವವರಿಗೆ ಎಲ್ಲಾ ಸೌಕರ್ಯಗಳೂ ದೊರಕಲೆಂದು ಭಗವಾನ್ ನಾರಾಯಣನನ್ನು ಪ್ರಾರ್ಥಿಸುತ್ತೇವೆ.

---

25-10-90, 1000. ಅಧ್ಯಾತ್ಮಪ್ರಕಾಶಮುದ್ರಣಾಲಯ, ಹೊಳೆನರಸೀಪುರ.